# HAVYAKA SANDESHA
ಹವ್ಯಕ ಸಂದೇಶ

॥धर्मो रक्षति रक्षितः॥

A Monthly Newsletter of Havyaka Welfare Trust, Estd. 1964

Vol. XIX, No. 12 March 2012 Pages 12 **Rs. 2/-**


## ಹವ್ಯಕರ ಪಿಕನಿಕ್ 26.01.2012



## KARKI VENKATARAMAN SHASTRI SURI AWARD FUNCTION

**on 4th March 2012 at Vishweshwarayya Sabhagraha, Karnataka Sangha, Matunga, (W), Mumbai- 400 016 from 3.00 p.m. onwards**

**SPECIAL GENERAL BODY MEETING on Sunday 18th March 2012 at Pejavar Math (Ground Floor), Santacruz (E), Mumbai**

*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T.*

**"Havyaka Sandesha"** is a monthly publication by **HAVYAKA WELFARE TRUST, Mumbai** B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆2665 2591

*Hon. Editor* : Smt. Amita S. Bhagwat

*Hon.Joint Editor* : G. V. Bhagwat

*Editorial Committee* : R. P. Hegde, R. M. Shastri, Smt. Shashikala Hegde, Smt. Tanuja Hegde

*Publisher* : Narayan Akadas R. **Hon. Gen. Secretary**

*Printed at* : M/s. Navin Printers **Mumbai - 400 016.** ✆ **2430 8316**

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, benefactor (BN) Rs.3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2011-2012**

*President* : N. R. Hegde, Dombivli
*Vice - President* : Shivkumar P. Bhagwat
*Hon. Gen. Secretary* : Narayan Akadas
*Hon. Jt. Secretary* : R. M. Shastri, Dombivli
*Hon. Treasurer* : A. G. Bhat

***Elected Members :***

Smt. Tanuja Hegde, R. P. Hegde, Smt. Shashikala Hegde, R. N.Kameshwar, A. K. Bhat, Smt. Uma Swamy, M. G. Ramakrishna, Sanjay Bhat, Ramesh Vaidya

***Co-opted Members :***

G. V. Bhagwat, Ganesh Shanbhag

***Editorial***

# She Also Needs Your Care

**The month of March reminds us of the upcoming Karki Venkataraman Shastri Suri Award function. The very mention of the great soul also reminds us of his drama "Iggappa Heggadeya Vivaha Prahasana" which is considered to be the first social drama written in Kannada highlighting the plight of women and the prevalent social injustice in those days. It is over a century now since it was written. It is also more than 100 years since the first International Women's Day was celebrated. The celebration of Women's Day on the 8th of March makes us think of different issues pertaining to women.**

**Almost all women associations make it customary or consider it obligatory to celebrate International Women's Day. Seminars are held and women who have achieved their feet in different fields are felicitated. Those who fought for women rights are also remembered. It was a long fight in western countries to get voting rights where as in India, women got voting rights along with men after independence and our constitution upholds gender equality. In these days with vast opportunities open to them one often feels whether we need a special day marked for women.**

**No matter how far women have come it is not far enough which is true even in the most just societies of the world. When it comes to discrimination, women still bear the brunt of it and if you scan the world's most totalitarian and restrictive regimes, it is still the women who remain the worst off. Though difficult may be the journey, the day is the reminder of the long way ahead.**

**In her attempt to grow beyond conventional role to realize her potentials, like a juggler, she has to strike a balance between her career aspiration and domestic duties, without fumbling and faltering. It is more difficult because she does not want one at the cost of another. She is an emotional being, the fiber of her existence being motherly love and compassion. She is also a rational being. Maintaining the cord between emotional and intelligent quotients can be very stressful.**

**A child needs all attention and care by mother. Mothers who give up their careers for the sake of their children experience a void in their life, once the children grow up. Once, my friend said "I gave up my job for the sake of my son when he was a baby. But these days whenever I give some advice he tells me to keep quiet. He feels that I am not exposed and inexperienced". Though a Home Maker (I don't like using the word House Wife) struggles entire day so that every body else at home may stay comfortably, she does not get the respect she deserves, which may lead to low self esteem.**

**Woman is the centre around whom the entire household revolves. She, who takes care of everybody often, neglects her own wellbeing and health. The ailments like depression, obesity, hypertension, diabetes, chronic backache stalk women, but at many times they are not taken care of. On this International Day, HUSBUNDS - please take some time and look at your wife whether she is keeping good health. CHILDREN - look at your mother whether she is pale or fine. She also needs your love, care and attention.**

Amita S Bhagwat

e-mail : amitabhagwat@gmail.com

*PAGE DONATED BY : **ADVOCATE M.S. PANDIT, PUNE***

# PRESIDENT'S MESSAGE

Dear Friends,

We still cherish the sweet memories of the picnic held on 26th January and are thankful to our organizers, for arranging different games and entertainment programs suiting to all age groups and to see that no one is bored. Good ambience and delicious food also made it more interesting. As the picnic was held on 26th January we had little apprehension about the number of members who may attend the same. We are happy that there was a good gathering. But we wish that as we spend quite a big amount in arranging the transportation, there should have been more response. If members co-operate and inform in advance about their participation we can arrange the bus as per the requirement. Let us keep this mind for our next picnic. We would like to put on record the contribution made by Mr. S.M.Hegde who not only donated the Rs. 8,000/- but also helped in arranging transportation. In spite of health constraints he and his wife actively participated in the picnic. They have set a good example which is a motivation to the organizers.

On 4th March 2012, Sunday, our most popular function "KARKI VENKTRAMAN SHASTRI SURI ENDOWMENT" program will be held in which SHRI ISHWAR DAITOTA will be honoured with the prestigious award which will be followed by cultural events. There will be a classical dance program and an interesting and good drama "Ambe". We are sure that the program will be interesting to all of you. We hope there will be a large gathering.

We are thrilled to note that SHRI CHTTANI RAMCHANDRA HEGDE is honoured with PADMASHREE. It is a proud moment to every kannadigas, art lovers and especially to Havyakas. As we understand that it is for the first time a YAKSHAGANA artist and that too from North Kanara got the title. It may be recalled that the prestigious KVSS Endowment Award was conferred upon him by our Trust in 2009.

We are also happy to inform you Mr. Pandurang Hegde from Kallagundi Koppa, Sirsi is selected in AMAZING INDIA. We all congratulate him. He has made all Havyakas proud.

Friends, we have called a Special General Body Meeting on 18th March 2012 to discuss and decide on the options given by Mr. Lodha in connection with the Dombivili plot. After a series of meeting Mr. Lodha has suggested the following alternatives:-

1. Wait for MMRDA final decision about reservation. Mr. Lodha has already filed his suggestions/objections against the reservations. Although he has opines that the chance are good but the time period cannot be said.
2. Take monetary payment from him.
3. There is 24 gunthas of plot available at Kolegaon (about 7 Kms. from Dombivili Station) which is in R zone. Take the plot and an additional amount of Rs. 75,00,000/-(Seventy Five Lakhs). However, all permissions for conversion and development should be borne by us.
4. Take one floor in CASA BELLA (4000 sq. ft.) or take one floor in CASA RIO (4500 sq. ft.). Both are a new town ship coming up on Kalyan Sheel Road.

Friends the decision which will be taken will have a far reaching consequence. Each alternate has its own merits and demerits. Let us debate and decide.

We look forward to meet you all.

**N.R. HEGDE**
*President*

*PAGE DONATED BY : **SMT. SHANTA V. HEGDE,** CARMICHAEL ROAD (DEC.-2012)*

# ಹವ್ಯಕ ಪಿಕ್‌ನಿಕ್

ಈ ವರ್ಷದ ಹವ್ಯಕ ಪಿಕ್‌ನಿಕ್‌ನ್ನು ಜನವರಿ 26,2012ರಂದು ಡೊಂಬಿವಲಿಯ ಬಿ. ಕೆ. ರಿಸೋರ್ಟ್‌ನಲ್ಲಿ ಆಯೋಜಿಸಲಾಗಿತ್ತು. ದಿನನಿತ್ಯದ ಯಾಂತ್ರಿಕ ಜೀವನಕ್ಕಿಂತ ಭಿನ್ನವಾಗಿ ವರ್ಷದಲ್ಲಿ ಒಂದುದಿನವಾದರೂ ಹವ್ಯಕರು ಪರಸ್ಪರ ಒಂದುಗೂಡಿ, ಆಟೋಟಗಳಲ್ಲಿ ಭಾಗವಹಿಸಿ, ನಕ್ಕು ನಲಿದು, ಉತ್ಸಾಹ ಹೊಂದಲು ಇದೊಂದು ಒಳ್ಳೆಯ ಅವಕಾಶ.

ಮುಂಬಯಿ ಹಾಗೂ ಉಪನಗರಗಳಿಂದ ನಮ್ಮ ಬಸ್ಸುಗಳು ಹವ್ಯಕ ಜನರನ್ನು ತುಂಬಿಸಿಕೊಂಡು ಪಿಕ್‌ನಿಕ್‌ನ ತಾಣದತ್ತ ಮುಖಮಾಡಿ ಬೆಳಿಗ್ಗೆ ಸೂರ್ಯ ಮೂಡುವದಕ್ಕೆ ಮೊದಲೇ ಹೊರಟವು. ಸ್ಥಳವನ್ನು ತಲುಪುತ್ತಿದ್ದಂತೇ ರುಚಿಯಾದ ಅವಲಕ್ಕಿ ಜೊತೆಗೆ ಡೋಕ್ಲಾ, ಸಿಹಿಯಾದ ಜಿಲೇಬಿ ಅಲ್ಲದೇ ಬಿಸಿಯಾದ ಚಾ, ಕಾಫಿ ಚಳಿಗೆ ಹಿತವನ್ನು ನೀಡಿತ್ತು. ತಿಂಡಿಯನ್ನು ತಿನ್ನುತ್ತಾ ಎಲ್ಲರೂ ತಮ್ಮ ಪರಿಚಯದವರೊಂದಿಗೆ ಮಾತನಾಡುವ ಹಾಗೂ ಹೊಸಬರನ್ನು ಪರಿಚಯಿಸಿಕೊಳ್ಳುವ ದೃಶ್ಯಕಂಡು ಬಂತು.

ಕುಮಾರಿ ಸುನಿಧಿ ಹೆಗಡೆ, ದೇಶಭಕ್ತಿಗತೆಗಳನ್ನು ಹಾಡಿ ಅಂದಿನ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ಅಧ್ಯಕ್ಷರಾದ ಶ್ರೀ ಎನ್. ಆರ್. ಹೆಗಡೆಯವರು ಎಲ್ಲರನ್ನೂ ಸ್ವಾಗತಿಸಿದರು.

ಮಕ್ಕಳು ಹಿರಿಯರು ಎನ್ನದೇ ಎಲ್ಲರೂ ಮೈಚಳಿ ಬಿಟ್ಟು ಭಾಗವಹಿಸುವಂತ News Paper Game ನೊಂದಿಗೆ ಅಂದಿನ ಆಟೋಟ ಸ್ಪರ್ಧೆ ಪ್ರಾರಂಭವಾಯಿತು. ನಂತರ ಮಕ್ಕಳ ವಯೋಮಾನಕ್ಕನುಗುಣವಾಗಿ Ball Dance ಹಾಗೂ Paper & Clip ಮುಂತಾದ ಆಟಗಳನ್ನು ಆಯೋಜಿಸಲಾಗಿತ್ತು. ಮಹನೀಯರಿಗಾಗಿ Carrot relay ಹಾಗೂ ಮಹಿಳೆಯರಿಗಾಗಿ Ballon Race ಆಟ ಎಲ್ಲರ ಗಮನ ಸೆಳೆದವು. ಹಿರಿಯ ಹವ್ಯಕರು 30 ಸೆಕೆಂಡ್‌ಗಳ ನಡಿಗೆಯನ್ನು ನಿಧಾನವಾಗಿ ನಡೆದು ಪೂರೈಸಿದರು.

ನಡು ಮಧ್ಯಾಹ್ನದ ಬಿಸಿಲೇರುತ್ತಿದ್ದಂತೇ ವಯಸ್ಸಿನ ಬೇಧವಿಲ್ಲದೇ ಈಜುಕೊಳದತ್ತ ಕೆಲವರು ಧಾವಿಸಿದರೆ ಉಳಿದವರು ¨Resortನ್ನು ಸುತ್ತಿಬರಲು ಹೊರಟರು. ಎಲ್ಲರೂ ವಾಪಸ್ಸಾಗುತ್ತಿದ್ದಂತೆ ಶುಚಿರುಚಿಯಾದ ಊಟ ಅವರನ್ನು ಕಾದಿತ್ತು. ಹವ್ಯಕರ ಪ್ರೀತಿಯ ಕೆನೆಮೊಸರು ಊಟಕ್ಕೆ ಹೆಚ್ಚಿನ ಸ್ವಾದವನ್ನು ನೀಡಿತ್ತು.

ಊಟವಾದ ನಂತರ ಸಂಕ್ರಾಂತಿಯ ನಿಮಿತ್ತ ಮಹಿಳೆಯರಿಗೆ ಅರಶಿನ-ಕುಂಕುಮ ಪರಸ್ಪರ ಎಳ್ಳುಬೆಲ್ಲದ ವಿತರಣೆಯಾದ ಕೂಡಲೇ ದಂಪತಿಗಳಿಗೆ ಮಾಲ-ಒ-ಮಾಲ ಎನ್ನುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಮದುವೆಯಲ್ಲಿ ಒಂದೇ ಮಾಲೆಯನ್ನು ಹಾಕಿಕೊಂಡರೂ, ಈ ಸ್ಪರ್ಧೆಯಲ್ಲಿ ಯಾರು ಹೆಚ್ಚು ಮಾಲೆಗಳನ್ನು ಹಾಕುವರು ಎಂದು ನಿರ್ಧರಿಸುವ ಆಟ ಅಂತೂ 3 ನಿಮಿಷದಲ್ಲಿ 15 ಪೇಪರ್ ಮಾಲೆಗಳನ್ನು ತಮ್ಮ ಪತ್ನಿಗೆ ಹಾಕಿ ಶ್ರೀ ರಮೇಶ್ ವೈದ್ಯರು ಮೊದಲ ಬಹುಮಾನ ಪಡೆದರು. ನಂತರದ ಡಾನ್ಸ್ ಫ್ಲೋರ್‌ನಲ್ಲಿ ಎಲ್ಲ ವಯಸ್ಸಿನವರೂ ತಮ್ಮದೇ ಆದ ಹೆಜ್ಜೆ ಹಾವಭಾವಗಳೊಂದಿಗೆ ಕುಣಿದು ಸಂತಸಪಟ್ಟರು. ಬಿಸಿ ಟೀ, ಕಾಫಿಯ ಜೊತೆಗೆ ಹೌಸಿ ಆಟದ ಬಿಸಿಯೂ ಸೇರಿತ್ತು. ಆ ಹೊತ್ತಿಗಾಗಲೇ ಸೂರ್ಯ ಪಶ್ಚಿಮಾಭಿಮುಖವಾಗಿದ್ದ. ಪಿಕ್‌ನಿಕ್‌ನ ಕೊನೆಯ ಹಂತವಾದ 'ಬಹುಮಾನ ವಿತರಣೆ'ಗೆ ಹೊತ್ತಿಗೆ ತಲುಪಿದೆವು. ಆಟದಲ್ಲಿ ಗೆದ್ದವರಿಗಷ್ಟೇ ಅಲ್ಲದೆ ಎಲ್ಲ ಮಕ್ಕಳು ಹಾಗೂ ಹಿರಿಯ ಹವ್ಯಕರಿಗೂ ನೆನಪಿನ ಕಾಣಿಕೆಯನ್ನು ನೀಡಲಾಯಿತು. ಪಿಕ್‌ನಿಕ್‌ನಲ್ಲಿ ಭಾಗವಹಿಸಿದ ಪ್ರತಿಯೊಂದು ಕುಟುಂಬಕ್ಕೂ ನೆನಪಿನ ಕಾಣಿಕೆಯನ್ನು ನೀಡಲಾಯಿತು. ರಾಷ್ಟ್ರಗೀತೆಯೊಂದಿಗೆ ಆ ದಿನದ ಕಾರ್ಯಕ್ರಮಕ್ಕೆ ಪೂರ್ಣವಿರಾಮ ನೀಡಲಾಯಿತು.

### SPONSORS FOR THE PICNIC

| | | |
|---|---|---|
| 1. | Shri S. M. Hegde | Rs. 8000/- |
| 2. | Shri N. R. Hegde | Rs. 2000/- |
| 3. | Shri Narayan Akadas | Rs. 2000/- |
| 4. | Shri R. G. Bhat | Rs. 1500/- |
| 5. | Shri V. G. Upadhyay | Rs. 1000/- |
| 6. | Shri K. C. Hegde | Rs. 1000/- |
| 7. | Shri Ramesh Vaidya | Rs. 1000/- |
| 8. | Shri M. G. Ramkrishna | Rs. 1000/- |
| 9. | Shri Rokesh Hegde | Rs. 1000/- |

| | | |
|---|---|---|
| **Morning Snacks** | : | Kumari Chandana Bhat/Master Shrinivas Bhat |
| **Haldi Kumkum** | : | Smt. Vimala Bhat, Smt. Arati Badkar<br>Smt. Uma Swamym, Smt. Parvati Chitrigimath |
| **Sports Events - Winner** | : | |
| 1. **Ball Dance** | : | 1) Master Shrinivas Ganesh Bhat<br>2) Master prashant G. Hegde<br>3) Kumari Niyati V. Bhat |
| 2. **Fold & Clip the Paper** | : | 1) Kumari Chandana G. Bhat<br>2) Kumari Tanuja Upadhyay |
| 3. **Balloon Race** | : | 1) Smt. Usha Gurumurthy |
| **Group Game** | : | 1) Kumari Sunidhi Hegde 2) Smt. Girija Bhat, 3) Smt. Suvarna Hegde 4) Smt. Saraswati Hegde 5) Kumari Yashashree Akadas, 6) Smt. Ganga Bhat 7) Smt. Madhu Hegde 8) Smt. Girija Hegde |
| 4. **Carrot Relay** | : | 1) Shri Santosh Bhat |
| **Group Game** | : | 2) Shri Rokesh Hegde 3) Dr. N. G. Bhat 4) Shri M. V. Bhat 5) Shri R. N. Kameshwar, 6) Shri V. G. Upadhyay, 7) Shri Umesh Hegde, 8) Shri Ramakant Shastri 9) Shri A. K. Bhat 10) Shri Anant Bhat |
| 5. **Couple Game** | : | 1 Smt. Sudha & Shri Ramesh Vaidya<br>2. Smt. Rashmi & Shri Suresh Rao |
| 6 **Senior Citizen** | : | 1) Smt. Lalita M. Bhat<br>2) Smt. Ganga N. Hegde |
| 7. **Guess Game** | : | Kumari Yashashree Akadas |
| 8. **Dance Floor** :<br>**Best Children** | : | Kumar Shreyas Bhat<br>Kumar Atharva Bhat |
| **Best Male Dancer** | : | Shri Sanjay Bhat |
| **Best Female Dancer** | : | Smt. Tanuja Bhat, Smt. Roopa Bhat |
| **Best Couple** | : | Smt. Shashikala & Shri Rokesh Hegde |
| **Senior Citizen** | : | Smt. Saroja Hegde |

ವಿವಿಧ ಸಂಘ-ಸಂಸ್ಥೆಗಳಲ್ಲಿ ಹವ್ಯಕ ಪ್ರತಿಭೆಗಳು : ಹವ್ಯಕ ಮಹಿಳೆಯರು ಹಲವು ಸಂಘ-ಸಂಸ್ಥೆಗಳ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದಾರೆ.

**ಚಾರ್‌ಕೋರ್ ಕನ್ನಡಿಗರ ಬಳಗದ –**

| | | | |
|---|---|---|---|
| **ರಂಗೋಲಿ ಸ್ಪರ್ಧೆ** | : ಶ್ರೀಮತಿ ಅಂಜನಾ ಹೆಗಡೆ | – | ದ್ವಿತೀಯ |
| | ಶ್ರೀಮತಿ ಶಶಿಕಲಾ ರಾವ್ | – | ತೃತೀಯ |
| **ಆರತಿ ತಟ್ಟೆ** | : ಶ್ರೀಮತಿ ವನಿತಾ ಭಟ್ | – | ಪ್ರಥಮ |
| | ಶ್ರೀಮತಿ ಶಶಿಕಲಾ ರಾವ್ | – | ತೃತೀಯ |
| **ಪಾಕಸ್ಪರ್ಧೆ** | : ಶ್ರೀಮತಿ ತನುಜಾ ಹೆಗಡೆ (ಸಿಹಿ) | – | ಪ್ರಥಮ |
| | ಶ್ರೀಮತಿ ಪುಷ್ಪಾ ಭಟ್ (ಖಾರ) | – | ತೃತೀಯ |

ಗೋರೆಗಾಂವ್ ಕನ್ನಡ ಸಂಘದವರು ಏರ್ಪಡಿಸಿದ್ದ ಪುರಂದರ ದಾಸರ ಹಾಡಿನ ಸ್ಪರ್ಧೆಯಲ್ಲಿ ಶ್ರೀಮತಿ ಸುನಂದಾ ಭಟ್‌ರವರು ದ್ವಿತೀಯ ಬಹುಮಾನವನ್ನು ಗಳಿಸಿದ್ದಾರೆ.

*PAGE DONATED BY :* ***SHRI BALCHANDRA MARKANDE, DOMBIVLI***

## ಚಿಟ್ಟಾಣಿ ರಾಮಚಂದ್ರ ಹೆಗಡೆಯವರಿಗೆ ಪದ್ಮಶ್ರೀ



ಬಡಗುತಿಟ್ಟಿನ ಯಕ್ಷಗಾನ ಕಲಾ ಪ್ರೇಮಿಗಳನ್ನು ತನ್ನ ಮೇರು ಪ್ರತಿಭೆಯಿಂದ ಮೋಡಿ ಮಾಡಿ, ಉತ್ತುಂಗ ಶಿಖರಕ್ಕೆ ಕರೆದೊಯ್ಯುವ ಮಾಂತ್ರಿಕ, ಹಲವಾರು ಪ್ರಶಸ್ತಿಗಳಿಂದ ಸನ್ಮಾನಿತರಾದ ಚಿಟ್ಟಾಣಿ ರಾಮಚಂದ್ರ ಹೆಗಡೆಯವರು 'ಪದ್ಮಶ್ರೀ' ಪ್ರಶಸ್ತಿಯಿಂದ ಸನ್ಮಾನಿತರಾದದ್ದು ಅವರ ಅಭಿಮಾನಿಗಳಲ್ಲಿ ಅಪಾರ ಸಂತೋಷವನ್ನು ಮೂಡಿಸಿದೆ. ತಮ್ಮ 77ರ ವಯಸ್ಸಿನಲ್ಲಿಯೂ ಗೆಜ್ಜೆ ಕಟ್ಟಿ ರಂಗಸ್ಥಳದಲ್ಲಿಳಿದರೆ ತಮ್ಮ ಅದ್ಭುತ ಅಭಿನಯದಿಂದ ನವ ಯುವಕರನ್ನು ನಾಚಿಸುವ ಚಿಟ್ಟಾಣಿಯವರು ಯಕ್ಷಲೋಕದಲ್ಲಿ ಬೆಳೆದು ಬಂದಿದ್ದು ಒಂದು ಯಶೋಗಾಥೆ. ಹೊಸಕುಳಿ ಎನ್ನುವ ಪುಟ್ಟ ಗ್ರಾಮದಲ್ಲಿ ಯಕ್ಷಗಾನದ ಭಾಗವತಿಕೆಯ ಹಾಡುಗಳನ್ನು ಗುನಗುನಿಸುತ್ತಲೇ ಅಡಿಕೆಮರ ಹತ್ತಿ ಕೊನೆ ಕೊಯ್ಯುತ್ತ, ಗೇರು ಹಕ್ಕಲಲ್ಲಿ ಕುಣಿಯುತ್ತ ತಮ್ಮ ಯಕ್ಷಲೋಕದಲ್ಲಿ ಅಡಿಗಾಲಿಟ್ಟ ಚಿಟ್ಟಾಣಿ ಹೆಗಡೆಯವರು ಮೂಡ್ಕಣಿ ನಾರಾಯಣ ಹೆಗಡೆ, ಕೆರೆಮನೆ ಶಿವರಾಮ ಹೆಗಡೆ, ಪರಮಯ್ಯ ಹಾಸ್ಯಗಾರ, ಇವರೆಲ್ಲರ ಮಾರ್ಗದರ್ಶನದಲ್ಲಿ, ಅವರೆಲ್ಲರ ಒಳ್ಳೆಯ ಗುಣಗಳನ್ನು ಮೈಗೂಡಿಸಿಕೊಂಡು ಬೆಳೆದು ಬಂದ ರೀತಿ ಅನನ್ಯವಾದುದು. ಇವರು ಯಕ್ಷಗಾನಕ್ಕೆ ಕೊಟ್ಟ ಕಾಣಿಕೆ ಈಗಾಗಲೇ ಪಿಎಚ್.ಡಿ. ಅಧ್ಯಯನದ ವಿಷಯವಾಗಿ "ಯಕ್ಷಗಾನ ಲೋಕಕ್ಕೆ ಚಿಟ್ಟಾಣಿ ರಾಮಚಂದ್ರ ಹೆಗಡೆ ಕೊಡುಗೆ" ಎಂಬ ಪ್ರಬಂಧಕ್ಕೆ ಧಾರವಾಡ ವಿಶ್ವವಿದ್ಯಾಲಯ ಡಾಕ್ಟರೇಟ್ ನೀಡಿದೆ.

ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಶ್ರೀ, ಶಿವರಾಮ ಕಾರಂತರ ಹುಟ್ಟೂರು ಪ್ರಶಸ್ತಿ, ಕರ್ಕಿ ವೆಂಕಟರಮಣ ಶಾಸ್ತ್ರಿ ಪ್ರಶಸ್ತಿ, ಪೇಜಾವರ, ಎಡನೀರು, ಪುತ್ತಿಗೆ ಪೀಠಾಧೀಶರು ನೀಡಿದ ಪ್ರಶಸ್ತಿ, ಇವುಗಳಿಂದ ಸನ್ಮಾನಿತರಾದ ಇವರಿಗೆ ಪದ್ಮಶ್ರೀ ಪ್ರಶಸ್ತಿ ದೊರೆತ್ತಿದ್ದುದು ಯಕ್ಷಲೋಕಕ್ಕೆ, ಉತ್ತರ ಕನ್ನಡ ಜಿಲ್ಲೆಗೆ ಹಾಗೂ ಇಡೀ ಹವ್ಯಕ ಸಮಾಜಕ್ಕೆ ಹೆಮ್ಮೆಯ ವಿಷಯವಾಗಿದೆ.

## ಹೊಸರುಚಿ

### ಅಕ್ಕಿಯಿಂದ ಮಾಡಿದ ಸಿಹಿ ಇಡ್ಲಿ

**ಬೇಕಾಗುವ ಸಾಮಗ್ರಿ :** ಒಂದು ವಾಟಿ ಅಕ್ಕಿ, 2 ಬಾಳೆಹಣ್ಣು, $^3/_4$ ವಾಟಿ ಪುಡಿಮಾಡಿದ ಬೆಲ್ಲ, ಕಾಯಿಸುಳಿ $^1/_4$ ವಾಟಿ, ದ್ರಾಕ್ಷಿ 10–12, ಯಾಲಕ್ಕಿ3–4 ಕಾಳು, ಜಾಯಿಕಾಯಿ ಪುಡಿ 1 ಚಿಟಕೆ, ಅನಾನಾಸ್‌ನ ಒಂದು ತುಂಡು.

**ಮಾಡುವ ವಿಧಾನ :** ಅಕ್ಕಿಯನ್ನು ತೊಳೆದು ಒಣಗಿಸಿ, ಹುರಿದು ಮಿಕ್ಸಿಯಲ್ಲಿ ರವೆ ಮಾಡಿ. ನಂತರ ಬೆಲ್ಲ, ಬಾಳೆಹಣ್ಣು, ಅನಾನಸ್ ಮಿಕ್ಸಿಯಲ್ಲಿ ಹಾಕಿ ತಿರುಗಿಸಿ, ಕಾಯಿತುರಿಯನ್ನು ಸೇರಿಸಿ ಮಿಕ್ಸ್‌ಮಾಡಿ ಮಿಶ್ರಣಕ್ಕೆ ಅಕ್ಕಿ ರವೆ ಹಾಕಿ ಮತ್ತೊಮ್ಮೆ ಮಿಕ್ಸಿಯಲ್ಲಿ ತಿರುಗಿಸಿ ಅದಕ್ಕೆ ಯಾಲಕ್ಕಿ, ಜಾಯಿಕಾಯಿ ಪೌಡರ್ ಹಾಕಿ ಮಿಕ್ಸ್ ಮಾಡಿ, ಇಡ್ಲಿ ಪಾತ್ರೆಯಲ್ಲಿ10–15 ಮಿನಿಟ್ ಬೇಯಿಸಿ. ಬಿಸಿ ಇಡ್ಲಿಯನ್ನು ತುಪ್ಪ ಅಥವಾ ಕಾಯ್ಹಾಲಿನೊಂದಿಗೆ ಸವಿಯಿರಿ.

**ಶಾರದಾ ಕರ್ಕಿ, ಡೊಂಬಿವಲಿ**

### ಕಡಲೆಬೇಳೆಯ ಮಸಾಲಾ ಉಪ್ಪಿಟ್ಟು

**ಬೇಕಾಗುವ ಸಾಮಗ್ರಿ :** $^1/_4$ ಕಿಲೋ ಕಡಲೆಬೇಳೆ, ಒಣಮೆಣಸಿನ ಕಾಯಿ ಸ್ವಲ್ಪ, ಕಾಯಿತುರಿ ಸ್ವಲ್ಪ, 1 ಕಟ್ಟು ಕೊತ್ತುಂಬರಿ ಸಪ್ಪು, ಶುಂಠಿ ಒಂದು ಚೂರು, ಹಿಂಗು, ಕರಿಬೇವು, ಸಾಸಿವೆ ಒಗ್ಗರಣೆಗೆ, ಈರುಳ್ಳಿ 2, ಎಣ್ಣೆ 2. ಟೇಬಲ್ ಚಮಚ, 1 ಚಮಚ ದನಿಯಾ, ರುಚಿಗೆ ತಕ್ಕಷ್ಟು ಉಪ್ಪು.

**ಮಾಡುವ ವಿಧಾನ :** 2 ಗಂಟೆಗಳ ಕಾಲ ನೆನೆದ ಕಡ್ಲೆಬೇಳೆಯನ್ನು ಮೆಣಸಿನ ಜೊತೆ ರುಬ್ಬಿಕೊಳ್ಳಿ. ನಂತರ ಹೆಚ್ಚಿಟ್ಟುಕೊಂಡ ಕೊತ್ತಂಬರಿ ಸಪ್ಪು ಶುಂಠಿ, ಈರುಳ್ಳಿ, ತೆಂಗಿನ ತುರಿ, ಉಪ್ಪು ಎಲ್ಲವನ್ನೂ ಹಾಕಿ ಹಿಟ್ಟಿಗೆ ಹಾಕಿ ಕಲಸಿ, ಇಡ್ಲಿ ಹಿಟ್ಟಿನ ಹದಕ್ಕೆ ನೀರು ಹಾಕಿ ಮಾಡಿಕೊಳ್ಳಿ. ನಂತರ ಬಟ್ಟಲಿಗೆ ಎಣ್ಣೆ ಹಚ್ಚಿ ಹಿಟ್ಟನ್ನು ಹಾಕಿ ಉಗಿಯಲ್ಲಿ ಬೇಯಿಸಿ. ತಣಿದ ನಂತರ ಚಿಕ್ಕ ಚಿಕ್ಕ ತುಂಡುಗಳನ್ನು ಮಾಡಿ ಬಂಡಿಯಲ್ಲಿ ಎಣ್ಣೆ ಹಾಕಿ ಒಗ್ಗರಣೆ ಹಾಕಿ ಈ ಚಿಕ್ಕ ಚಿಕ್ಕ ತುಂಡು ಹಾಕಿ ಮಗಚಿ ಕಾಯಿತುರಿ, ದನಿಯಾ ಹಾಕಿರಿ, ಬಿಸಿ ಬಿಸಿಯಾದ ಕಡಲೆ ಬೇಳೆಯ ಮಸಾಲಾ ಉಪ್ಪಿಟ್ಟು ತಯಾರಾಗಿದೆ. ಇದರಲ್ಲಿ ಸಪ್ಪು ಬೇಳೆ ಒಳಗೊಂಡಿದ್ದು ಬೆಳಗಿನ ತಿಂಡಿ, ಮಕ್ಕಳಿಗೆ ಟಿಫಿನ್ ಡಬ್ಬಕ್ಕೆ ರುಚಿಯಾದ ತಿಂಡಿಯಾಗಿದೆ.

**ಗೀತಾ ಹೆಗಡೆ, ಡೊಂಬಿವಲಿ**

*( ಡೊಂಬಿವಲಿಯಲ್ಲಿ ನಡೆದ ಪಾಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಸಿಹಿ ಹಾಗೂ ಖಾರಾ ತಿನಿಸುಗಳು )*

## DONATION

| | | | |
|---|---|---|---|
| 1. | Ganga Baggon | Rs. 25,000 | OldAge Home |
| 2. | Ambika Printers And Publications | Rs. 10,000 | |
| 3 | Shrikant Avabhrat | Rs, 1000 | Donation for W.W.C. |
| 4. | Pradeep Kameshwar | Rs, 5,000 | Donation for H.W.T. |
| 5. | Ashok R. Nayak | Rs. 3000 | Donation for W.W.C. |
| 6. | Sujatha D. K. | $600 | Donation for W.W.C. |
| 7. | Sudha Hegde | Rs. 500 | Donation for W.W.C. |

## ಬಾಳ ಹಸಿರು

ಎದೆಯ ಒಳಗಿನ ಕಾವು
ನೋವನೆಲ್ಲವ ನುಂಗಿ
ಏನೊ ಕನಸಿನ ಚಿತ್ರ
ಕಣ್ಣ ಎದುರು

ನಾಳೆ ಎಂಬುದ ಮರೆಸಿ
ನೂರು ಆಸೆಯ ಇರಿಸಿ
ಚಿತ್ತ ಚೈತ್ರದ ಚಿಲುಮೆ
ಬಾಳ ಹಸಿರು

ಮನದ ಚಿತ್ತಾರದಲಿ
ಬಣ್ಣಗಳ ನೀ ಇರಿಸಿ
ಬಣ್ಣನೆಗೆ ನಿಲುಕದಿಹೆ
ನನ್ನ ಉಸಿರು

**ಜಿ. ಜಿ. ಹೆಗಡೆ, ಬಾಳಗೋಡ**

# ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬೈ
# HAVYAKA WELFARE TRUST, MUMBAI

## "ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ" ಪ್ರಶಸ್ತಿ ಪ್ರದಾನ ಸಮಾರಂಭ-2012
## "Karki Venkataraman Shastri Suri" Award Presentation Ceremony - 2012

**DATE : 4-3-2012 TIME : 3.00 P.M. ONWARDS**
**Venue : Vishweshwarayya Hall, Karnataka Sangha, Matunga (W), Mumbai-400 016.**

| | |
|---|---|
| ಸಹಕಾರ / Co-operation | ಕರ್ನಾಟಕ ಮಲ್ಲ, ಕನ್ನಡ ದೈನಿಕ ಮುಂಬೈ<br>Karnataka Malla, Kannada Daily Paper, Mumbai<br>ಕರ್ನಾಟಕ ಸಂಘ. ಮಾಟುಂಗಾ ( ಪ )<br>Karnataka Sangha, Matunga (W) |
| ಪ್ರಶಸ್ತಿ ಪಾತ್ರರು / Awardee | **ಶ್ರೀ ಈಶ್ವರ ದೈತೋಟ** ( ಖ್ಯಾತ ಪತ್ರಿಕೋದ್ಯಮಿ, ಸಮಾಜ ಸೇವಕ )<br>**Shri ISHWAR DAITOTA (Eminent Journalist, Social Worker)** |
| ಮುಖ್ಯ ಅತಿಥಿಗಳು / Chief Guest | ವಿದ್ವಾನ್ ಕೈರಬೆಟ್ಟು ವಿಶ್ವನಾಥ ಭಟ್<br>( ಸ್ಥಾಪಕಾಧ್ಯಕ್ಷ ಶ್ರೀಕೃಷ್ಣ ಪ್ರತಿಷ್ಠಾನ; ಮುಂಬಯಿ )<br>**Vidwan Kairabettu Vishwanath Bhat**<br>**(Founder & President Srikrishna Pratishtana, Mumbai)** |
| ಗೌರವ ಅತಿಥಿಗಳು / Guest of Honour | ಶ್ರೀ ಚಂದ್ರಶೇಖರ ಪಾಲೆತ್ತಾಡಿ ( ಸಂಪಾದಕರು, ಕರ್ನಾಟಕ ಮಲ್ಲ )<br>**Shri CHANDRASHEKHAR PALETTADI** (Editor, Karnataka Malla)<br>ಡಾ.ಜಿ. ಡಿ. ಜೋಶಿ ( ಅಧ್ಯಕ್ಷರು, ಕರ್ನಾಟಕ ಸಂಘ, ಮಾಟುಂಗಾ ಪಶ್ಚಿಮ )<br>**Dr. G. D. JOSHI** (President, Karnataka Sangha, Matunga West) |
| ಅಧ್ಯಕ್ಷತೆ / Chairperson | ಶ್ರೀ ಎನ್. ಆರ್. ಹೆಗಡೆ ( ಅಧ್ಯಕ್ಷರು, ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬೈ )<br>**Shri N. R. HEGDE** (President, HWT, Mumbai) |

**ಮನೋರಂಜನಾ ಕಾರ್ಯಕ್ರಮಗಳು / Entertainment Programmes**

| | |
|---|---|
| ಶಾಸ್ತ್ರೀಯ ನೃತ್ಯ / Classical Dance | ಕು। ವೈಷ್ಣವಿ ಶೆಟ್ಟಿ (Kum. Vaishnavi Shetty)<br>ಕು। ಮೇಘಮಾಲಾ ಪೂಜಾರಿ (Kum. Meghamala Poojari)<br>ಕು। ಧೃುತಿ ಶೆಟ್ಟಿ, (Dhruti Shetty) |
| ನಾಟಕ / Drama | ಅಂಬೆ / Ambe<br>Kalabharathi, Karnataka Sangha<br>Directed by : Dr. Bharatkumar Polipu<br>Written by : Dr. Saraju Katkar |

ಸರ್ವರೂ ಬಂಧು-ಮಿತ್ರರೊಡಗೂಡಿ ಆಗಮಿಸಿ
ಕಾರ್ಯಕ್ರಮವನ್ನು ಚೆಂದಗಾಣಿಸಿಕೊಡಬೇಕಾಗಿ ವಿನಂತಿ

ಶ್ರೀ ಎನ್. ಆರ್. ಹೆಗಡೆ ( ಅಧ್ಯಕ್ಷರು )
ಶ್ರೀ ನಾರಾಯಣ ಅಕದಾಸ ( ಗೌ. ಕಾರ್ಯದರ್ಶಿಗಳು )
ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ

ಶ್ರೀಮತಿ ತನುಜಾ ಹೆಗಡೆ
( ಸಂಚಾಲಕರು, ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ದತ್ತಿ ಕಾರ್ಯಕ್ರಮ )

*Page Donated by : **Shri Suhas Gunishastri**, Prabhadevi In the memory ofhis parents **Late Smt. Rajeshwari & Late Shri P. V. Gunishastri** , Past President, H.W.T. (Dec.-2012)*

# HAVYAKA WELFARE TRUST

B-207, Valmiki Apartment, Sunder Nagar, Vidyanagari Post, Mumbai 400 098

## NOTICE

## SPECIAL GENERAL BODY MEETING

Notice is hereby given that a Special General Body meeting will be held **on Sunday, the 18th March 2012 at 3 p.m at Pejawar Matt** (Ground Floor) Santacruz (East), Mumbai to transact the following agenda:-

### AGENDA

1. Welcome speech by the President;
2. To discuss and decide on the alternatives offered by M/s Lodha Developers since the Land of Dombivili is marked under reservation (RG) in the proposed plan of MMRDA.
3. Vote of thanks.

**ALL MEMEBERS ARE REQUESTED TO ATTEND THE MEETING.**

**For & on behalf of the Managing Committee**

**sd/-**
**NARAYAN AKADAS**
***Hon. Secretary***

**N.B. : If there is no quorum then the meeting shall stand adjourned and the adjourned meeting shall be held on the same date and place at 3.30 p.m. even if there is no quorum.**


**UIL**

**UGRU INDUSTRIES**

*With Best Compliments from*

**UGRU INDUSTRIES**

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*

ಓ ಮರ್ಯಾದಾ ಪುರುಷೋತ್ತಮರೆ, ಮುನಿದು ಮಾತುಬಿಟ್ಟ ಮಡದಿಯ ಚಿಂತೆಯೇ? ಬಿಡಿ ನಿಮ್ಮ ಚಿಂತೆಯನ್ನು,
ನಿಮ್ಮ ನಿಂತು ಹೋದ ಸರಸ ಸಲ್ಲಾಪಗಳನ್ನು ಪುನರಾರಂಭಿಸಲು ಸಹಕರಿಸುತ್ತವೆ ನಮ್ಮ ಸೀರೆಗಳು !
ಬನ್ನಿ, ಒಳ್ಳೆಯ ಸೀರೆಯನ್ನು ಆಯ್ಕೆ ಮಾಡಿ, ಹೋಗಿ ಮುದ್ದಿನ ಮಡದಿಯನ್ನು ಮೋಕೆ ಮಾಡಿ.




ಭಾರತೀಯ ಕುಟುಂಬ ವ್ಯವಸ್ಥೆಯೇ ಸರ್ವ ಶ್ರೇಷ್ಠವೆಂದು ಜಗತ್ತು ಒಪ್ಪುತ್ತಿದೆ, ಇದನ್ನು ಅರಿತ ನಂತರ.
ನ್ಯಾಯವಾದ ಬೆಲೆ, ಉತ್ತಮ ಗುಣಮಟ್ಟ, ಸೌಜನ್ಯಮಯ ಸೇವೆ ಇವು ಮೂರು ನಮ್ಮ ಸೀರೆ
ಮಳಿಗೆಯ ವೈಶಿಷ್ಟ್ಯವೆಂದು ನೀವು ಒಪ್ಪುತ್ತೀರಿ ಒಮ್ಮೆ ಇಲ್ಲಿಗೆ ಆಗಮಿಸಿದ ಅನಂತರ.

OM KAANCHI NARAYANEE 卐 ओम कानची नारायणी




ಆರಂಭಿಕ ಬೆಲೆ ರೂಪಾಯಿ 225ರಿಂದ ಎರಡು - ಮೂರು ಸಾವಿರ, ಐದು - ಹತ್ತು ಸಾವಿರ, ಹದಿನೈದು -
ಇಪ್ಪತ್ತು ಸಾವಿರ ಬೆಲೆ ವರೆಗಿನ ಕಾಂಜೀವರಂ, ಧರ್ಮಾವರಂ, ಬನಾರಸಿನ, ನವನವೀನ, ಉತ್ಕೃಷ್ಟ
ಸೀರೆಗಳನ್ನು ನಮ್ಮ ಈ ಎರಡೂ ಮಳಿಗೆಗಳಿಂದ ಆರಿಸಿ ಪಡೆಯಬಹುದು.

1st / 2nd Floor, Indraprasth Shopping Centre, S.V. Rd., Nr. Rly. Stn. Borivli (W), Mumbai 92.
Tel.: 28017156, 28642997, 28630722

(ADVT.)

ಸ್ತ್ರೀಯರು ಗೌರವಿಸಲ್ಪಡುವಲ್ಲಿ ವಿಜೃಂಭಿಸುತ್ತದೆ ಜಗತ್ತಿನ ಸರ್ವಶ್ರೇಷ್ಠ ಸಂಸ್ಕೃತಿ


*PAGE DONATED BY :* ***SMT. TRIVENI BHATSHIKAR & SHRI R. T. BHATSHIKAR,*** *GHATKOPAR IN THE MEMORY OF* ***LATE SHRI T. R. BHATSHIKAR*** *(DEC.-2012)*

# ಕಟುವಾಸ್ತವದಲಿ ನಿಂತು...

**ಭವ್ಯ ಹೆಗಡೆ, ಹಳೆಯೂರು**

ತಾನು, ತನ್ನ ಓದು, ತನ್ನ ಮನೆ ಹಾಗೂ ತನ್ನ ಖಾಸಗೀ ಜೀವನದ ಹೊರತಾಗಿಯೂ ಒಂದು ಜೀವನ ಇದೆ ಎಂಬುದನ್ನು ಮರೆತು ಜೀವಿಸುತ್ತಿರುವ ಮೊಗ್ಗಿನ ಮನಸ್ಸುಗಳನ್ನು ಒಮ್ಮೆ ಕೂರಿಸಿಕೊಂಡು ವಾಸ್ತವದ ಅರಿವು ಮೂಡಿಸಿ ಅವರ ಜವಾಬ್ದಾರಿಯನ್ನು ತಿಳಿಹೇಳಬೇಕಾಗಿದೆ.

ಅದೇ ಭೂಮಿ, ಅದೇ ಮಣ್ಣು, ಅದೇ ಪರಿಸರ, ಅದೇ ರೀತಿಯ ಹುಮ್ಮನಸ್ಸಿನ ಬಿಸಿರಕ್ತದ ಅರಳಲನುವಾದ ಮನಸ್ಸುಗಳು... ಯಾವುದೂ ಬದಲಾಗಿಲ್ಲ. ಆದರೆ ಆ ಮನಸ್ಸುಗಳ ಚಿಂತನೆಯ ಶೈಲಿ ಮಾತ್ರ ತೀರಾ ಎನ್ನುವಷ್ಟು ಬದಲಾಯಿಸಿಬಿಟ್ಟಿದೆ. ದೇಶ, ರಾಷ್ಟ್ರ-ಸ್ವಾತಂತ್ರ್ಯ ಅನ್ನುತ್ತಿದ್ದ ಮನಸ್ಸು ಇಂದು ಮೋಜು-ಕಾಲೇಜು-ಹಣ ಎನ್ನುತ್ತಿದೆ. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮನಸ್ಸು ಇಂದು ಚಿಕ್ಕ ಚಿಕ್ಕ ಕಾರಣಕ್ಕೆ ಗುಂಪು ಘರ್ಷಣೆಯಲ್ಲಿ ತೊಡಗಿದೆ. ದೇಶ-ರಾಷ್ಟ್ರ-ಹೋರಾಟ-ರಾಷ್ಟ್ರಾಭಿಮಾನ ಎಂಬ ಶಬ್ದಗಳೆಲ್ಲ ಈಗ ನಾಟಕದಲ್ಲೋ ಸಿನಿಮಾಗಳಲ್ಲೋ ಬರುವಂತಹ ಡೈಲಾಗ್‌ಗಳಾಗಿಬಿಟ್ಟಿವೆ. ಹೀಗೆ ಪ್ರತಿಯೊಂದರಲ್ಲೂ ತದ್ವಿರುದ್ಧವಾಗಿ ಬೆಳೆಯುತ್ತಿರುವ ಮನಸ್ಸು ಸ್ವಾತಂತ್ರ್ಯೋತ್ಸವ ಹಾಗೂ ಗಣರಾಜ್ಯೋತ್ಸವವನ್ನೇ ನೆನಪಿನಲ್ಲಿಟ್ಟುಕೊಳ್ಳಲು ಮರೆಯುತ್ತಿರುವಾಗ ಇನ್ನು ಆ ಮಾರ್ಚ್ 23ರನ್ನು ಹೇಗೆ ನೆನಪಿನಲ್ಲಿಡಲು ಸಾಧ್ಯ?

ಈಗ ಸರಿಯಾಗಿ 80 ವರ್ಷಗಳ ಹಿಂದೆ ಅಂದರೆ 1931ರ ಮಾರ್ಚ್ 23ರಂದು ಇದೇ ದೇಶದ ಮಣ್ಣಲ್ಲಿ ಜನಿಸಿ, ಬೆಳೆದ ಭಗತ್‌ಸಿಂಗ್, ರಾಜಗುರು, ಸುಖದೇವ್ ಸಿಂಗ್ ಎಂಬ ಮೂವರು ಕ್ರಾಂತಿಕಾರಿ ಸ್ವಾತಂತ್ರ ಹೋರಾಟಗಾರರ ಮುಖಗಳನ್ನು ಕಪ್ಪುಬಟ್ಟೆಯಿಂದ ಮುಚ್ಚಿ ಕೊರಳಿಗೆ ಉರುಳು ಬಿಗಿದು ಕಾಲಿನ ಕೆಳಗಿನ ಹಲಿಗೆಯನ್ನು ಸರಿಸಿ ಗಲ್ಲು ಶಿಕ್ಷೆಯನ್ನು ನೀಡಲಾಗಿತ್ತು. ತಾಯಿ ಭಾರತಿಯ ಸ್ವಾತಂತ್ರಕ್ಕಾಗಿ ಹೋರಾಡಿದ ಆ ಮನಸ್ಸುಗಳಿಗೆ ಸಿಕ್ಕ ಉಡುಗೊರೆ ಅದಾಗಿತ್ತು. ಎಷ್ಟೋ ಮಹನೀಯ ಭಾರತೀಯರು, ಆಂಗ್ಲರಿಂದಲೂ ಗೌರವಿಸಿಕೊಳ್ಳುತ್ತಿರುವ ಹೋರಾಟಗಾರರು ಇದ್ದರೂ ಇಲ್ಲದಂತಿದ್ದು ನೂರಾರು ವರ್ಷಗಳ ಕಾಲ ದೇಶಕ್ಕೆ ಕೊಡುಗೆಯಾಗಿರಬೇಕಾಗಿದ್ದ ಮನಸ್ಸುಗಳನ್ನು ಬಲಿ ಕೊಟ್ಟಿದ್ದರು. ಜನ್ಮ ನೀಡಿದ ತಾಯಿ ಭಾರತಿ ಆಂಗ್ಲರ ಬಂಧನದಲ್ಲಿದ್ದಾಗ ಬಿಡಿಸಲೆಂದು, ಅವಳಿಗೆ ಸ್ವಾತಂತ್ರ್ಯ ನೀಡಲೆಂದು ಹೋರಾಡಿದ ಮಹಾನ್ ಕ್ರಾಂತಿಕಾರಿಗಳು ಇವರು. ಸಾಮಾನ್ಯವಾಗಿ ಇವರ ಪರಿಚಯ ಮಾಡಿಕೊಡುವುದು ಸರಿಯಲ್ಲ. ಯಾಕೆಂದರೆ ಇವರ ನೆನಪು ಹಾಗೂ ಸಾಹಸಗಳನ್ನು ನಾವು ಚಿಕ್ಕಂದಿನಿಂದಲೇ ಕೇಳುವಂತಹದ್ದು. ಆದರೆ ಇಂದಿನ ಮೊಗ್ಗಿನ ಮನಸ್ಸಿಗೆ ಅವೆಲ್ಲಾ ಬೇಡವಾಗಿದೆ. ಹಾಗಾಗಿ ಅತಿ ದುಃಖ ಹಾಗೂ ನಾಚಿಕೆಯಿಂದ ಹೇಳಲೇಬೇಕಿದೆ.

1947ರಿಂದ ಈಚೆಗೆ ದೇಶವನ್ನು ನೈತಿಕವಾಗಿ ಹಾಳುಗೆಡವುತ್ತಲೇ ಬಂದಿದ್ದೇವೆ. ಸ್ವಾತಂತ್ರ್ಯದೊಳಗೆ ಇದ್ದ ಒಗ್ಗಟ್ಟು ವಿಶಾಲ ಮನಸ್ಸು, ಬಾಂಧವ್ಯ, ನಿಷ್ಠೆ ಇವೆಲ್ಲವೂ ಸ್ವಾತಂತ್ರ್ಯದ ನಂತರ ನಾಪತ್ತೆಯಾಗಿ ಬಿಟ್ಟಿವೆ. ಆಡಳಿತ ಎಂಬ ಅಧಿಕಾರದ ಹೆಸರಿನಲ್ಲಿ ಜನರನ್ನು ಇಂಚಿಂಚಾಗಿ ಕಿತ್ತುತಿನ್ನುವ ರಾಜಕಾರಣ, ವಿದೇಶದ ಕಂಪನಿಗಳನ್ನೇ ನೆಚ್ಚಿಕೊಂಡು ಉದ್ಯೋಗ ಮಾಡುವ ಜನತೆ, ದೇಶದ ಬೆನ್ನೆಲುಬು ಎಂದೇ ಕರೆಯಿಸಿಕೊಳ್ಳುತ್ತಿರುವ ರೈತನನ್ನೇ ಕೀಳಾಗಿ ಕಾಣುವ ಕಾಲ, ಹೊಟ್ಟೆಗೆ ಬೇಕಾಗುವುದೆಂದೇ ಸಾಕಿಕೊಳ್ಳುವ ರೌಡಿಗಳು, ರೌಡಿಗಳ ಕೈಯಲ್ಲೇ ಅಧಿಕಾರ ಕೊಡುವಂತಹ ಅಧಿಕಾರಿಗಳು. ನ್ಯಾಯಕ್ಕೆ ಜಾಗವಿರದಂತಹ ನ್ಯಾಯಾಲಯಗಳು, ಭಾರತೀಯ ಸಂಸ್ಕೃತಿಯನ್ನೇ ಮರೆಯಿಸುವ ಪಾಶ್ಚಾತ್ಯ ಬೆಡಗುಗಳು, ತಾಯಿ ಭಾರತಿಯನ್ನು ಒಂದೊಂದೇ ಭಾಗವಾಗಿ ಮಾರಲು ತಯಾರಿರುವ ಶ್ರೀಮಂತರು ಹೀಗೆ ಹತ್ತು ಹಲವಾರು ಸಮಸ್ಯೆಗಳಲ್ಲಿ ಸಿಲುಕಿದ ಭಾರತಕ್ಕೂ ಅಂದು ಬ್ರಿಟಿಶರು ಆಳಿದ ಭಾರತಕ್ಕೂ ವ್ಯತ್ಯಾಸವೇ ಇರದಂತಾಗಿದೆ. ಹೀಗಿದ್ದಾಗಲೂ ಮೊಗ್ಗಿನ ಮನಸ್ಸು ಕೈಕಟ್ಟಿ ಕೂತರೆ ಹೇಗೆ?

ಅಂದು ಪಂಜಾಬ್‌ದ ಲಾಯ್‌ಪುರದಲ್ಲಿ 1907 ಸೆಪ್ಟೆಂಬರ್ 28ರಂದು ಜನಿಸಿದ ಭಗತ್ ಸಿಂಗ್, ಮಹಾರಾಷ್ಟ್ರದ ಒಂದು ಬಡ ಕುಟುಂಬದಲ್ಲಿ ಜನಿಸಿದ ರಾಜಗುರು, 1907ರಲ್ಲಿ ಪಂಜಾಬ್‌ನ ಲುಧಿಯಾನಾದಲ್ಲಿ ಜನಿಸಿದ ಸುಖದೇವರ ಧೈರ್ಯ, ಹೋರಾಟದ ಶಕ್ತಿ-ಯುಕ್ತಿಗಳು ಇಂದಿನ ಮೊಗ್ಗಿನ ಮನಸ್ಸುಗಳಿಗೂ ಮಾರ್ಗದರ್ಶನವಾಗಬೇಕು. ನಾವೀಗ ಸ್ವತಂತ್ರವಾಗಿದ್ದೇವೆ ಎಂಬ ಕಲ್ಪನೆಯಲ್ಲಿ ಶಾಂತವಾಗಿದ್ದರೆ ಮುಂದೊಂದು ದಿನ ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಯಾವುದಾದರೊಂದು ಅಧಿಕಾರ ದಂಡೆತ್ತಿ ಬರಬಹುದು! ಅಂದು ಪಾಶ್ಚಾತ್ಯರ ಆಳ್ವಿಕೆಯಿಂದ ಪೂರ್ತಿಯಾಗಿ ಸೆರೆಯಲ್ಲಿದ್ದ ತಾಯಿ ಭಾರತಿಯ ಕಣ್ಣಲ್ಲಿ ತನ್ನನ್ನು ಬಿಡಿಸಿಕೊಳ್ಳಲು ತನ್ನೆಲ್ಲಾ ಮಕ್ಕಳು ಹೋರಾಡುತ್ತಿದ್ದಾರಲ್ಲಾ ಎಂಬ ಖುಷಿ ಇತ್ತು. ಆದರೆ ಈಗ ಯಾವುದೇ ಸಂಕೋಲೆಗಳು ಇರದಿದ್ದರೂ ತಾಯಿ ಭಾರತಿ ಕೊರಗುತ್ತಿದ್ದಾಳೆ. ತಮ್ಮ ತಮ್ಮೊಳಗೇ ಕಚ್ಚಾಡಿಕೊಂಡು ತನ್ನನ್ನು ಕಣ್ಣೆತ್ತಿಯೂ ನೋಡದ ತನ್ನ ಕೋಟ್ಯಂತರ ಮಕ್ಕಳನ್ನು ನೋಡಿ ಆಕೆ ಮರುಗುತ್ತಿದ್ದಾಳೆ.

ಖಾಸಗೀಕರಣ, ಜಾಗತೀಕರಣ ಎಂಬಂತಹ ಹೆಸರುಗಳಲ್ಲಿ ನಮ್ಮನ್ನು ನಾವೇ ಗುಲಾಮಗಿರಿಯತ್ತ ಎಳೆದುಕೊಂಡು ಹೋಗುತ್ತಿದ್ದೇವೆ. ನಾಗರಿಕತೆ ಎಂಬ ಹೆಸರಿನಲ್ಲಿ ತಮ್ಮತನವನ್ನೇ ನಾವು ಮರೆಯುತ್ತಿದ್ದೇವೆ. ಖಾಸಗೀ ಸಂತೋಷದ ಹಂಬಲಕ್ಕಾಗಿ ದೇಶದ ಅಭಿವೃದ್ಧಿಗಾಗಿ ಇಟ್ಟುಕೊಂಡ ಹಣವನ್ನು ಸ್ವಿಸ್ ಬ್ಯಾಂಕ್‌ನಲ್ಲಿ ಸುರಿದಿಡುತ್ತಿದ್ದೇವೆ. ಈಗಲೂ ಯಾವುದೋ ದೇಶದಿಂದ ಬಂದ ವ್ಯಕ್ತಿಯನ್ನು, ದೇಶವನ್ನು ಒಡೆಯುವುದರ ಜೊತೆ ಜೊತೆಗೆ ಮನಸ್ಸುಗಳನ್ನು ಒಡೆದ ವಂಶಜರನ್ನೇ ಕೂರಿಸಿ ದೇಶವಾಳಿಸಬೇಕೆಂದು ಹೇಳುವ ದಡ್ಡತನವನ್ನು ತೋರಿಸುತ್ತಿದ್ದೇವೆ. ಒಟ್ಟಿನಲ್ಲಿ ನಾವೇ ನಾವಾಗಿ ಮತ್ತದೇ ರೀತಿಯ ಬಂಧನಕ್ಕೆ ಸಿಲುಕಲು ಹೊರಟಿದ್ದೇವೆ. ನಮ್ಮ ಹಿರಿಯರು ತಮ್ಮ ಪ್ರಾಣವನ್ನೇ ತೆತ್ತು ನೀಡಿದ ಸ್ವಾತಂತ್ರ್ಯವನ್ನು ನಾವು ಬೇಜವಾಬ್ದಾರರಾಗಿ ಮತ್ತದೇ ಕಪಿಮುಷ್ಠಿಯಲ್ಲಿಡಲು ಹವಣಿಸುತ್ತಿದ್ದೇವೆ.

ಇದು ವಾಸ್ತವ! ಆದರೆ ಈ ವಾಸ್ತವವನ್ನು ಬದಲಾಯಿಸಬೇಕು. ಅದು ಮೊಗ್ಗಿನ ಮನಸ್ಸುಗಳಿಂದ ಮಾತ್ರ ಸಾಧ್ಯ. ಹೊಸ ಸಮಾಜದ ನಿರ್ಮಾಣವಾಗಬೇಕು. ಹಿಂದಿನವರು ಮಾಡಿದ ತಪ್ಪುಗಳನ್ನೆಲ್ಲಾ ಒರೆಸಿಹಾಕಿ ಅಲ್ಲಿ ಹೊಸ ಕಾಯಿದೆಗಳ ರಚನೆ ಮಾಡಬೇಕು. ಆದರ್ಶಯುತ ಸರಕಾರ, ನ್ಯಾಯಯುತ ಆಡಳಿತ ಜಾರಿಯಾಗಬೇಕು. ದೇಶದ ಸಂಪತ್ತಿಗೆ ಮುಳುವಾದವರನ್ನು ದಂಡಿಸಲೇಬೇಕು. ಭ್ರಷ್ಟ ಅಧಿಕಾರಿ ಮಾಫಿಯಾಗಳ, ಕೆಟ್ಟ ರಾಜಕಾರಣಿಗಳ, ಜನರ ರಕ್ತಹೀರಿ ಜೀವಿಸುವವರ ದೇಶವನ್ನೇ ಮಾರಲು ಹೊರಟವರ ವಿರುದ್ಧ ಕತ್ತಿ ಎತ್ತಬೇಕು. ಭಗತ್ ಸಿಂಗ್ ಹೇಳುವಂತೆ ''ಯಾರಿಗೇ ಆಗಲಿ ದುಃಖವನ್ನು ನೀಡುವುದು ಹಿಂಸೆ, ಆದರೆ ದುಃಖವನ್ನು ನೀಡುವ ದುಷ್ಟರನ್ನು ಸಂಪೂರ್ಣ ನಾಶ ಮಾಡುವುದು ಪುಣ್ಯದ ಕೆಲಸ'' ಅಂತಹ ಪುಣ್ಯದ ಕೆಲಸ ಯುವ ಮೊಗ್ಗುಗಳಿಂದಾಗಬೇಕು. ಹಾಗಾದಾಗ ಮಾತ್ರ ದೇಶವನ್ನು ಉಳಿಸಿಕೊಳ್ಳಲು ಸಾಧ್ಯ. ಇಲ್ಲವಾದರೆ ನಮ್ಮ ದೇಶದ ಸ್ವಾತಂತ್ರ್ಯಕ್ಕೆ ನಮ್ಮ ಕೈಯಿಂದಲೇ ತಿಲಾಂಜಲಿ ಬಿಡಬೇಕಾಗುತ್ತದೆ.

''ನಿನ್ನ ತಾಯಿ, ನಿನಗೆ ಅನ್ನ ನೀಡಿದ ಅನ್ನ ಪೂರ್ಣೆ, ಸಸ್ಯಶಾಮಲೆ ಮಾತೆ ಇಂದು ಬಿಕ್ಕುತ್ತಿದ್ದಾಳೆ. ಅವಳ ವ್ಯಾಕುಲತೆ ನಿನ್ನನ್ನು ಸ್ವಲ್ಪವೂ ವಿಚಲತೆಗೊಳಪಡಿಸುವುದಿಲ್ಲವೇ? ನಿನ್ನ ನಿರ್ಜೀವತನಕ್ಕೆ ಧಿಕ್ಕಾರವಿರಲಿ, ನಿನ್ನ ಈ ಕಾರ್ಯದಿಂದ ಪೂರ್ವಜರೂ ತಲೆತಗ್ಗಿಸುವಂತಾಗಿದೆ. ಈಗಲೂ ನಿನ್ನ ಯಾವುದಾದರೂ ಅಂಗದಲ್ಲಿ ಜೀವ ಬಾಕಿ ಉಳಿದಿದ್ದರೆ ಏಳು. ನಿನ್ನ ತಾಯಿಯ ಹಾಲಿನ ಋಣವನ್ನು ತೀರಿಸು. ಅವಳ ಗೌರವವನ್ನು ಕಾಪಾಡುವ ಸಂಕಲ್ಪ ಕೊಡು. ಅವಳ ಕಣ್ಣೀರಿನ ಒಂದೊಂದು ತೊಟ್ಟಿನ ಮೇಲೆ ಆಣೆ ಮಾಡು. ಅವಳನ್ನು ಮುಕ್ತಗೊಳಿಸು''-ಭಗತ್‌ಸಿಂಗ್.

ನಮ್ಮ ದೇಶವನ್ನು ಉಳಿಸುವ ಹೊಣೆ ಮೊಗ್ಗಿನ ಮನಸ್ಸುಗಳ ಮೇಲಿದೆ. ಈಗ ಹೇಳಿರುವುದ್ಯಾವುದೂ ಕಲ್ಪನೆಯಲ್ಲಿ ವಾಸ್ತವ! ಅದನ್ನು ಬದಲಾಯಿಸುವ ಸಾಮರ್ಥ್ಯ ನಮ್ಮದಾಗಬೇಕು. ಕುಳಿತು ಯೋಚಿಸಿ. ●

( ಕೃಪೆ: ಧ್ಯೇಯನಿಷ್ಠ ಪತ್ರಕರ್ತ )

*PAGE DONATED BY : **SHRI V. G. BHAT, NIGDI** (DEC.-2012)*

# ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಬದುಕು ಬರಹ

✍ ಎಂ. ವಿ. ಶರ್ಮಾ, ತದ್ದಲಸೆ

ಕರ್ಕಿ ಹೊನ್ನಾವರ ಸನಿಹದ ಪುಟ್ಟ ಊರು. ಕುಮಟಾ-ಹೊನ್ನಾವರ ಹೆದ್ದಾರಿಯಲ್ಲಿ ಇನ್ನೇನು ಹೊನ್ನಾವರ ಬರುತ್ತದೆಯೆನ್ನುವಾಗ ಎಡಭಾಗದಲ್ಲಿ ಸಣ್ಣ ಸಣ್ಣ ಮನೆಗಳು, ತೆಂಗಿನ ತೋಟ, ಅಡಿಕೆ ಬಾಳೆ, ತುಂಡು ಭತ್ತದ ಗದ್ದೆಗಳಿರುವ ಪ್ರದೇಶ, ಬಹುತೇಕ ಗುಂಟೆಗಳ ಲೆಕ್ಕದಲ್ಲಿರುವ ಜಮೀನುದಾರರು. ಇಲ್ಲಿಯ ನೆಲ ಕಸುವಿನಿಂದ ಕೂಡಿದ್ದು. ಹಾಗಾಗಿ ಇಲ್ಲಿ ಕಸುಬುದಾರರು ಹೆಚ್ಚು. ಹೆಚ್ಚಾಗಿ ವಿದ್ಯಾವಂತರು ಬಹಳ ಮೊದಲೇ ಇಲ್ಲಿಂದ ದಿಲ್ಲಿಗೆ, ಮುಂಬೈಗೆ ಹೋಗಿ ಬಾಳು ನಡೆಸಿದ್ದಾರೆ. ಹಿಂದಿನ ತಲೆಮಾರಿನವರನ್ನು ಯಾರನ್ನಾದರೂ 'ನಿಮಗೆ ಕಲಿಸಿದ ಮಾಸ್ತರ್‍ರು ಯಾರು?' ಎಂದು ಕೇಳಿದರೆ ಕರ್ಕಿಯ ಶಂಭು ಮಾಸ್ತರ್‍ರು, ಭಟ್ ಮಾಸ್ತರ್‍ರು ಎಂದು ಉತ್ತರಿಸುತ್ತಾರೆ. ಬೋಧನೆ, ಸಾಧನೆ ಕರ್ಕಿ ಊರಿನ ಕ್ರಿಯಾಶೀಲತೆ, ಕಷ್ಟ ಕಾರ್ಪಣ್ಯದಲ್ಲಿಯೇ ಮನುಷ್ಯ ಎದ್ದು ನಿಂತು ಜಾಗೃತನಾಗುತ್ತಾನೆ. ಸುಖ ಸಂತೋಷದಲ್ಲಿ ಕುಗ್ಗಿಹೋಗುತ್ತಾನೆ.

ಈಗ ಸುಮಾರು ನೂರರವತ್ತು (160) ವರ್ಷದ ಹಿಂದೆ ವೆಂಕಟರಮಣ ಶಾಸ್ತ್ರಿ ಜನ್ಮವಾಯಿತು. ಇಲ್ಲಿ ಐದಾರು ವರ್ಷದ ಈ ಬಾಲಕ ಒಂದು ಇಡೀ ಹಗಲು ಇಲ್ಲಿ ಸರಿಯಾಗಿ ನೆಲೆ ನಿಂತಿದ್ದಿಲ್ಲ. ಸೂರ್ಯಗಳಿಗೆಯ ಲೆಕ್ಕದಲ್ಲಿ ಸಂಚರಿಸುವಂತೆ ಇವನದೂ ಓಡಾಟ ಹತ್ತು ವರ್ಷಕ್ಕೇ ವೇದಪಾಠ, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತಿ, ಕರ್ಕಿಯ ಮಣ್ಣಿನ ಗುಣದಂತೆ, ಅಂದುಕೊಂಡಿದ್ದನ್ನು ಮಾಡಲೇಬೇಕು. ಆಗದು ಎಂಬ ಮಾತೇ ಇಲ್ಲ. ಗುರಿಯಿರುವಾಗ ವೇಗ ಹೆಚ್ಚು.

ವೆಂಕಟರಮಣ ಶಾಸ್ತ್ರಿಗೆ ಕರ್ಕಿ ಸಣ್ಣ ಕ್ಷೇತ್ರವಾಯಿತು. ಹೆದ್ದಾರಿಯಲ್ಲಿ ಹೆಜ್ಜೆ ಗುರುತು ಮೂಡಿಸಬೇಕೆಂಬ ಮಹತ್ವಾಕಾಂಕ್ಷೆ. ಆಗ ತೇರು, ಜಾತ್ರೆ, ಉತ್ಸವಗಳಿಗೆ ಹೋದ ಬಾಲಕನಿಗೆ ಮುಂಬೈಗೆ ಹೋಗಬೇಕೆಂಬ ಬಯಕೆ ಉಂಟಾಯಿತು. ಇದಕ್ಕೆ ಕಾರಣ ತೇರು ಜಾತ್ರೆಗಳಲ್ಲಿ ಒಂದು ಮಾಯಾ ಪೆಟ್ಟಿಗೆಯ ಕಿಂಡಿಯೊಳಗೆ ತಲೆಹಾಕಿ ರಾಹುಗನ್ನಡಿಯಲ್ಲಿ ಭಾರತದ ಬೇರೆ ಬೇರೆ ಪ್ರದೇಶಗಳ ಚಿತ್ರ ಪ್ರದರ್ಶನ ಮಾಡಲಾಗುತ್ತಿತ್ತು. 'ಅವರ ಗರ್ದಿ ಗರ್ದಿ ನೋಡು, ಬೊಂಬೆ ಪಟ್ಣ ನೋಡು' ಎಂದು ಮುಂಬೈ ಮಹಾನಗರದ ಚಿತ್ರ ತೋರಿಸಲಾಗುತ್ತಿತ್ತು. ಇಂಥ ಮುಂಬೈಯಲ್ಲಿ ತಾನು ಏನನ್ನಾದರೂ ಮಾಡಬೇಕೆಂಬ ಮನಸ್ಸಾಯಿತು. ಆದರೆ ಹೋಗುವುದು ಹೇಗೆ? ಆಗ ಕುಮಟಾ, ಹೊನ್ನಾವರ, ಭಟ್ಕಳ ಬಂದರುಗಳಿಂದ ಇಲ್ಲಿಯ ಸಾಂಬಾರ ಪದಾರ್ಥಗಳು ಗೋವಾ, ಮುಂಬೈಗೆ ಹೋಗುತ್ತಿದ್ದವು. ಪೋರ್ಚುಗೀಸರು ಈ ಕೆಲಸ ಮಾಡುತ್ತಿದ್ದರು. ವೆಂಕಟರಮಣ ಪೋರ್ಚುಗೀಸನೊಬ್ಬನ ದೋಸ್ತಿ ಮಾಡಿದ. ಆತ, ಆಯಿತು ಕರೆದುಕೊಂಡು ಹೋಗುವದಾಗಿ ಮಂಗಳೂರಿಗೆ ಕರೆದುಕೊಂಡೂ ಹೋದ. ಆದರೆ ದುರದೃಷ್ಟ ಮುಂಬೈಗೆ ಹೋಗಲಾಗಲಿಲ್ಲ. ಮರಳಿ ಕುಂದಾಪುರ ವೆಂಕಟೇಶ ಭಟ್ಟರಲ್ಲಿ ಎರಡು ದಿನ ಉಳಿದು ಮರಳಿ ಮನೆಗೆ ಬಂದದ್ದಾಯಿತು. ಕರೆದುಕೊಂಡು ಹೋಗುತ್ತೇನೆಂದವನಿಗೂ ತುಂಬಾ ವಿಷಾದವಾಯಿತು. 'ನೀವು ಮಾತಿಗೆ ಬರವಿಲ್ಲದವರು. ನಾವು ಮೂಲ 'ಮಾತುಬರ'-ತಪ್ಪದೆ ಮಾತು ನಡೆಸಿಕೊಡುವವರು' ಎಂದನಂತೆ. ಈ ಘಟನೆಯಿಂದ ಕರೆದುಕೊಂಡು ಹೋಗುವವನ ಹೊಣೆ ಹೆಚ್ಚಾಯಿತು. ತನ್ನ ಸಂಗಡಿಗರಿಗೆ 'ತೋಮಣ ಆಸಾಮಿ, ಬೊಂಬೈ ಜಾವಚಾ' ಎಂದಿದ್ದಲ್ಲದೆ ಅದಕ್ಕೆ ವ್ಯವಸ್ಥೆ ಮಾಡಿದ್ದುದಾಗಿ ಹೇಳುತ್ತಾರೆ. ಹವ್ಯಕ ಬ್ರಾಹ್ಮಣರಿಗೆ 'ಆಸಾಮಿ' ಎನ್ನಲಾಗುತ್ತಿತ್ತು. ಉತ್ತರ ಭಾರತದ ಆಸ್ವಾಮಿನವರೆಂದು. ಆಸಾಮಿ ಖಾತೆ, ಆಸಾಮಿ ಸಾಲ ಪದ ಪ್ರಯೋಗ ಇವತ್ತಿಗೂ ಚಾಲ್ತಿಯಲ್ಲಿದೆ. ಆದರೆ ಆಸಾಮಿಗೆ ಪದಕೋಶದಲ್ಲಿ ಸ್ಥಾನವಿಲ್ಲ.

ಈ ಬಾರಿ ಮುಂಬೈ ಪ್ರಯಾಣ ಹಾನಗಲ್, ಹಾವೇರಿ, ಹುಬ್ಬಳ್ಳಿ ಮೂಲಕವಾಯಿತು. ಹುಬ್ಬಳ್ಳಿಯಲ್ಲಿ ಒಂದು ದಿನ ಉಳಿದು ಸೊಲ್ಲಾಪುರಕ್ಕೆ ತೆರಳಿ ಎರಡು ದಿನವಿದ್ದು ಮುಂಬೈ ಸೇರಿದ್ದಾಯಿತು. ಈ ಮೊದಲೇ ಮುಂಬೈಯಲ್ಲಿ ಕಾರವಾರ, ಅಂಕೋಲಾ ಕಡೆಯವರು (ಕುಲಕರ್ಣಿ, ದೇಸಾಯಿ, ನಾಡಕರ್ಣಿ ಇತ್ಯಾದಿ) ಹೋಗಿ ನೆಲಸಿದ್ದರು. ತಮ್ಮ ತವರಿನವರು ಎಂಬ ಅಭಿಮಾನ ಅಕ್ಕರೆಯಿಂದ ನೋಡಿಕೊಂಡರು. ವೆಂಕಟರಮಣ 'ಬೊಂಬೇ ಶಾಸ್ತ್ರಿ'ಯಾದ.

ಹೋದ ಆರಂಭದಲ್ಲಿ ಬರೆಯುವದು ಸಂಪಾದಿಸುವದು, ಪ್ರಕಟಿಸುವ ಕೆಲಸ ಮಾಡಿದರು. ಶಿವಾಜಿ ಪರಂಪರೆಯ ಕೆಲವು ವಿದ್ವಾಂಸರ ಪರಿಚಯವಾಗಿತ್ತು. ಕದಂಬ ಅರಸು ಮನೆತನದ ವೀರ ಪರಂಪರೆಯ ವಿದ್ವಾಂಸರೆಂದು ಮನ್ನಣೆಯಿತ್ತು.

ಈ ಎಲ್ಲ ಸಂಗತಿಗಳು ವೆಂಕಟರಮಣ ಶಾಸ್ತ್ರಿಗಳ ಕುರಿತಾಗಿ ಇಲ್ಲಿ ಹರಡಿದ ಜನಪದ ಸಾಹಿತ್ಯ. ಇದಕ್ಕೆ ದೇಶ, ಕಾಲ, ನಿರ್ದಿಷ್ಟವಿಲ್ಲ. ಸತ್ಯವೋ ಸುಳ್ಳೋ ವಿಮರ್ಶೆಗೆ ಒಳಪಡುವುದಿಲ್ಲ. ಯಾಕೆಂದರೆ ವೆಂಕಟರಮಣ ಶಾಸ್ತ್ರಿಗಳ ಒಡನಾಡಿಗಳೆಲ್ಲ ಈಗ ಪಿತಾಮಹ, ಪ್ರಪಿತಾಮಹರಾಗಿಬಿಟ್ಟಿದ್ದಾರೆ.

### ಪತ್ರಿಕೆ ಪ್ರಕಾಶನ

1885ರಲ್ಲಿ ಹವ್ಯಕ ಸುಬೋಧ ಪತ್ರಿಕೆ ಪ್ರಕಟಿಸುವ ಮುನ್ನವೇ ಅವರು ಪುಸ್ತಕ ಪರಕಟಿಸಿ, ಓದುಗರಿಗೆ ಒದಗಿಸುವ ಪರಿಚಾರಕರಾಗಿ ಬಿಟ್ಟಿದ್ದರು. ಇದಕ್ಕೆ ಇವರಿಗೆ ನೆರವಾದವರು ಉತ್ತರ ಕನ್ನಡದಿಂದ ಸಾಂಬಾರು ಪದಾರ್ಥಗಳನ್ನು ತಂದು, ಇಲ್ಲಿಂದ ದವಸಧಾನ್ಯ ತೆಗೆದುಕೊಂಡು ಹೋಗುತ್ತಿದ್ದ ವ್ಯಾಪಾರಿಗಳೇ ಆಗಿದ್ದರು. ವ್ಯವಸ್ಥಿತವಾಗಿ ಈ ಕೆಲಸ ನಡೆದದ್ದರಿಂದ ಪತ್ರಿಕೆ ಪ್ರಕಟಿಸುವ ಪ್ರವೃತ್ತಿ ಅವರಲ್ಲುಂಟಾಯಿತು. ಪತ್ರಿಕೆ ಪ್ರಕಟಿಸುವ ಅವರ ಉದ್ದೇಶ ಬೇಗ ಈಡೇರಲಿಲ್ಲ. ಬ್ರಿಟಿಷರ ಹದ್ದುಗಣ್ಣು ವೆಂಕಟರಮಣ ಶಾಸ್ತ್ರಿಗಳ ಮೇಲಿತ್ತು. ಕಾನೂನು ಕಟ್ಟಳೆ ಆಡಳಿತ ಬಿಗಿಯಾಗಿತ್ತು. ದೆಹಲಿಯ ಓರಿಯಂಟಲ್ ಲ್ಯಾಬ್ರರಿಗೆ ಪತ್ರಿಕೆಯ ರಜಿಸ್ಟ್ರೇಷನ್ ಕಳಿಸಿದ್ದಕ್ಕೂ ಅನುಮತಿ ಸಿಕ್ಕಿರಲಿಲ್ಲ. ಆಗ ಪ್ರಾಯೋಗಿಕ ಸಂಚಿಕೆಯನ್ನು ತರುತ್ತಾ ಹೋದರು. ಹವ್ಯಕ ಸುಬೋಧದ ಹೆಸರಿನೊಂದಿಗೆ ಇನ್ನೊಂದು ಹೆಸರನ್ನು ಕಳಿಸಿದ್ದರು. ಆ ಮೇಲೆ ಎರಡೂ ಹೆಸರಿಗೆ ಅನುಮತಿ ಸಿಕ್ಕಿತು. 'ಪಂಚಮುಖಿ' ಎನ್ನುವವರು ಈ ಕೆಲಸಕ್ಕೆ ನೆರವಾಗಿದ್ದರೋ ಅಥವಾ ಅದು ಇನ್ನೊಂದು ಹೆಸರಾಗಿತ್ತೋ ತಿಳಿಯುವದಿಲ್ಲ.

ಅವರ ಪುಸ್ತಕ, ಪತ್ರಿಕೆಗಳು ಧಾರವಾಡಕ್ಕೆ ಬೇಗ ಬರುತ್ತಿದ್ದವು. ಕರ್ನಾಟಕ ಹಿತೈಷಿಣಿ ಗ್ರಂಥ ಭಂಡಾರ, ಸರಸ್ವತಿಪುರಂ ಎಂಬಲ್ಲಿಗೆ ಬರುತ್ತಿದ್ದಾಗ ಘಟ್ಟದ ಮೇಲಿನವರು ತರಿಸಿಕೊಳ್ಳುತ್ತಿದ್ದರು. ಸ್ವಾತಂತ್ರ್ಯ ಹೋರಾಟದ ಕರಪತ್ರಗಳೇನಾದರೂ ಇರುತ್ತವೋ ಎಂದು ಬ್ರಿಟಿಷರು ಅನುಮಾನಿಸಿದ್ದುಂಟು.

ಲಿಂಗೇಶ ಶರ್ಮಾ ಅವರು ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ ನಾಟಕವನ್ನು ಮರು ಮುದ್ರಣ (1953) ಮಾಡುವಾಗ ಇದರ ಕರ್ತೃ 'ಹವ್ಯಕ ಹಿತೇಚ್ಛು' ಎಂದಿದೆ. ಮುಂಡಿಗೇಸರದ ಬಳಗಂಡಿ ನರಸಿಂಹ ಹೆಗಡೆಯವರು ಈ ನಾಟಕ ಕೃತಿಯನ್ನು ಕೊಡುವಾಗ ಇದು ಕರ್ಕಿ ವೆಂಕಟರಮಣ ಶಾಸ್ತ್ರಿಗಳದ್ದು ಎಂದೇ ಕೊಟ್ಟಿದ್ದರು. ಆದರೆ ಬಾಯಿ ಮಾತಿನಮೇಲೆ ಹಾಗೆ ನಿರ್ಣಯಕ್ಕೆ ಬರುವುದು ಸರಿಯಲ್ಲ. ಮೇಲಾಗಿ ಶಿವರಾಮು ಧಾರೇಶ್ವರ ಎಂಬುವವರು ಕೂಡಾ ಉತ್ತರ ಕನ್ನಡ ಜಿಲ್ಲೆಯಿಂದ ಮುಂಬೈಗೆ ಹೋಗಿ ನೆಲೆಸಿದ್ದು 1887ರಲ್ಲಿಯೇ ಇದೇ ವಸ್ತು ವಿಷಯ ಕುರಿತು ನಾಟಕ ರಚಿಸಿ ಪ್ರಕಟಿಸಿದ್ದರು. ಇದರಿಂದ ಯಾವ ಗೊಂದಲವೂ ಉಂಟಾಗಬಾರದೆಂದು ಧಾರವಾಡ ವಿಶ್ವವಿದ್ಯಾಲಯದ ಸ್ನೇಹಿತರ ಸಹಾಯದಿಂದ ಓರಿಯೆಂಟಲ್ ಲ್ಯಾಬ್ರರಿಯೊಂದಿಗೆ ಪತ್ರ ವ್ಯವಹಾರ ನಡೆಸಿದರು. ಆಗ 'ಇಗ್ಗಪ್ಪ

*Continued on page 11*

*PAGE DONATED BY :* ***WELL WISHER OF HWT***

# ಸಂಕ್ಷಿಪ್ತ ಸುದ್ದಿಗಳು

## ಕರ್ನಾಟಕ ಸಂಘದಲ್ಲಿ ಮಹಿಳಾ ಸಂಸ್ಕೃತಿ ಸಂಭ್ರಮ

ಕರ್ನಾಟಕ ಸಂಘ ಮಾಟುಂಗಾದಲ್ಲಿ ಇತ್ತೀಚೆಗೆ ನಡೆದ 'ಮಹಿಳಾ ಸಂಸ್ಕೃತಿ ಸಂಭ್ರಮ' ಸಮಾರಂಭ. 'ನಮ್ಮಲ್ಲಿರುವ ಚೈತನ್ಯವನ್ನೆಲ್ಲ ತಮ್ಮ ಕುಟುಂಬದವರ ಅಭ್ಯುದಯಕ್ಕಾಗಿ ಮೀಸಲಾಗಿರುವ ಮಹಿಳೆಯರು ತಮಗಾಗಿಯೂ ಸ್ವಲ್ಪ ಸಮಯವನ್ನು ಮೀಸಲಾಗಿರಿಸಿಕೊಂಡು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು' ಎಂದು ಖ್ಯಾತ ನ್ಯಾಯವಾದಿ ರೋಹಿಣಿ ಸಾಲ್ಯಾನ್‌ರವರು ಕರ್ನಾಟಕ ಸಂಘ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ದೀಪ ಬೆಳಗಿಸಿ ಮಹಿಳಾ ಸಂಸ್ಕೃತಿ ಸಮಾರಂಭವನ್ನು ಉದ್ಘಾಟಿಸಿ ನುಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ನೇತ್ರತಜ್ಞೆ ಅನಘಾ ಹೇರೂರವರು ಮಾತನಾಡಿ ಇಂದಿನ ಯುಗದಲ್ಲಿ ಮಹಿಳೆಯು ಎಲ್ಲಾ ಕ್ಷೇತ್ರದಲ್ಲಿಯೂ ತನ್ನ ಕೊಡುಗೆಯನ್ನು ನೀಡಿದ್ದಾಳೆ ಹೊರಗಿನ ಕೆಲಸ ಹಾಗೂ ಗೃಹ ಕೃತ್ಯಗಳನ್ನು ನಿಭಾಯಿಸುವಾಗ ಒತ್ತಡಕ್ಕೆ ಒಳಗಾಗುವ ಮಹಿಳೆ ಅದನ್ನು ಮೀರಿ ನಿಂತು ಸಮಾಜ ಕಟ್ಟುವ ಶಕ್ತಿಯಾಗಿ ರೂಪುಗೊಳ್ಳುತ್ತಾಳೆ ಎಂದು ನುಡಿದರು.

'ಮಹಿಳೆಯರ ಅಂತರಂಗದ ಮಾತುಗಳು' ವಿಷಯದ ಮೇಲೆ ವಿಚಾರ ಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು. ಮಹಿಳೆಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಾಯಿತು. ಸುಶೀಲಾ ದೇವಾಡಿಗ ಕಾರ್ಯಕ್ರಮ ನಿರೂಪಿಸಿದರು. ಸುಮಂಗಲಾ ಶೆಟ್ಟಿಯವರು ಸ್ವಾಗತಿಸಿ ಪ್ರಸ್ತಾವನೆಗೈದರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕವಯತ್ರಿ ಡಾ. ಸುನೀತಾ ಎಂ. ಶೆಟ್ಟಿಯವರು ವಹಿಸಿಕೊಂಡಿದ್ದರು.

## ಕೃತಿ ಬಿಡುಗಡೆ

ಪತ್ರಕರ್ತ ಶ್ರೀನಿವಾಸ ಜೋಕಟ್ಟೆ ಅವರ ಕುತೂಹಲಕರ ಪ್ರವಾಸ ಲೇಖನಗಳ ಸಂಕಲನ 'ಸಂಚಾರ ಸಾಗರ ಮತ್ತು ಮಿಲೇನಿಯಂ ಸೂರ್ಯ' ಕೃತಿಯು ಗೋರೆಗಾಂವ್ ಕರ್ನಾಟಕ ಸಂಘದ ಬಾರ್ಕೂರು ರುಕ್ಮಿಣಿ ಶೆಟ್ಟಿ ಸಭಾಗೃಹದಲ್ಲಿ ಸಂಘದ ಮಾಜಿ ಅಧ್ಯಕ್ಷರಾದ ಮುಂಡ್ಕೂರು ಸುರೇಂದ್ರ ಸಾಲ್ಯಾನ್‌ರವರಿಂದ ಬಿಡುಗಡೆಯಾಯಿತು.

## ನಿಧನ



ಹೊಸಕುಳಿ-ಹೊನ್ನಾವರ ತಾಲೂಕು ಶ್ರೀ ಪರಮಯ್ಯ ನಾಗಪ್ಪ ಹೆಗಡೆ ಇವರು ದಿನಾಂಕ 6.1.2012, ಶುಕ್ರವಾರ ತಮ್ಮ 88ನೇ ವಯಸ್ಸಿನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಫಲ ಜ್ಯೋತಿಷ್ಯದಲ್ಲಿ, ವಾಸ್ತುಶಾಸ್ತ್ರ ಹಾಗೂ ಫಲ ಮುಹೂರ್ತದಲ್ಲಿ ದಕ್ಷಿಣೋತ್ತರಕನ್ನಡ ಜಿಲ್ಲೆಗಳಲ್ಲಿ ತುಂಬು ಪ್ರಸಿದ್ಧರಾಗಿದ್ದರು. ಇವರಿಗೆ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಮ್ ಶ್ರೀ ಸಂಸ್ಥಾನ ಗೋಕರ್ಣ ಶ್ರೀ ರಾಮಚಂದ್ರಾಪುರ ಮಠದ ಮೊದಲಿನ ಶ್ರೀಗಳಾದ ಶ್ರೀ ರಾಘವೇಂದ್ರ ಭಾರತಿ ಸ್ವಾಮಿಜಿಯವರು 'ಜ್ಯೋತಿಷ್ಯ ವಿಭೂಷಣ ವಿದ್ವಾನ್' ಪದವಿಯನ್ನು ಆಗಸ್ಟ್ 1986ರಲ್ಲಿ ಶ್ರೀ ರಾಘವೇಂದ್ರ ಭಾರತಿ ಸವೇದ ಸಂಸ್ಕೃತ ವಿದ್ಯಾಸಂಸ್ಥೆ, ಸುಬ್ರಹ್ಮಣ್ಯ, ಮುಗ್ವಾದಲ್ಲಿ ದಯಪಾಲಿಸಿದ್ದರು. ಹಾಗೂ ನಮ್ಮ ಈಗಿನ ಶ್ರೀಗಳಾದ ಶ್ರೀ ರಾಘವೇಶ್ವರ ಭಾರತಿ ಸ್ವಾಮಿಜಿಯವರು ಜೂನ್ 2007ರಲ್ಲಿ ಸರ್ವಜಿತ್‌ಸಾವೋತ್ಸವದ ಸಂದರ್ಭದಲ್ಲಿ ಹೊನ್ನಾವರದ ಹವ್ಯಕ ಸಭಾ ಭವನದಲ್ಲಿ ಸನ್ಮಾನಿಸಿರುವರು. ಅಲ್ಲದೆ ಹವ್ಯಕ ಅಭಿವೃದ್ಧಿ ಸಂಘ (ರಿ) ಹೊನ್ನಾವರ ಇವರು ಜನವರಿ 1999ರಲ್ಲಿ ಹಾಗೂ ಅನೇಕ ಸಂಘ-ಸಂಸ್ಥೆಗಳು ಇವರನ್ನು ಸನ್ಮಾನಿಸಿರುವರು. ಇವರು ಅನೇಕ ಸಹಕಾರಿ ಸಂಘ ಸಂಸ್ಥೆ ಹಾಗೂ ವಿದ್ಯಾ ಸಂಸ್ಥೆಗಳನ್ನು ಕಟ್ಟಿಸಿರುವರು ಹಾಗೂ ಧಾರ್ಮಿಕ ಕೆಲಸ ಕಾರ್ಯಗಳಲ್ಲಿಯೂ ಕೂಡ ಮುಂದಾಳಾಗಿದ್ದರು. ಇವರು ಪತ್ನಿ ಇಬ್ಬರು ಪುತ್ರರು ಹಾಗೂ ಒಬ್ಬ ಪುತ್ರಿಯನ್ನು ಅಗಲಿದ್ದಾರೆ. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಅನುಗ್ರಹಿಸುವಂತೆ ಭಗವಂತನಲ್ಲಿ ಬೇಡಿಕೊಳ್ಳುತ್ತೇವೆ.

## ಮುಂಬಯಿಯಲ್ಲಿ ಸಂಗೀತ-ನೃತ್ಯ ತಾಳವಾದ್ಯ ಪರೀಕ್ಷಾ ಕೇಂದ್ರ

ಕರ್ನಾಟಕ ಪ್ರೌಢ ಪರೀಕ್ಷಾ ಮಂಡಳಿ, ಬೆಂಗಳೂರು (S.S.L.C. Board) ಸಂಗೀತ-ನೃತ್ಯ ಮತ್ತು ತಾಳವಾದ್ಯ ಪರೀಕ್ಷಾ ಕೇಂದ್ರವನ್ನು ಮುಂಬಯಿಯಲ್ಲಿ ನಡೆಸಲು ಒಪ್ಪಿ ಆದೇಶ ನೀಡಿದೆ. ಇದು ಎಸ್.ಎಸ್.ಎಲ್.ಸಿ. ಬೋರ್ಡಿನ ಇತಿಹಾಸದಲ್ಲಿ ಪ್ರಥಮ ದಾಖಲೆ. ಕಳೆದ ಎರಡು ವರ್ಷಗಳಿಂದ ಕನ್ನಡ ಸಾಹಿತ್ಯ ಪರಿಷತ್ತು-ಮಹಾರಾಷ್ಟ್ರ ಘಟಕವು ಮಾಡಿದ ಪ್ರಯತ್ನದಿಂದ ಈ ಸೌಲಭ್ಯವು ದೊರೆಯಿತು. ಇನ್ನು ಆಸಕ್ತ ವಿದ್ಯಾರ್ಥಿಗಳಿಗೆ ಪರೀಕ್ಷೆಗಾಗಿ ಬೆಂಗಳೂರಿಗೆ ಹೋಗುವ ಅವಶ್ಯಕತೆ ಇಲ್ಲ. ಪರೀಕ್ಷಾ ವ್ಯವಸ್ಥೆಯನ್ನು ಮುಂಬಯಿಯಲ್ಲಿ ಮಾಡಲಾಗುತ್ತಿದೆ. ಈ ಅವಕಾಶವನ್ನು ಒದಗಿಸಿಕೊಟ್ಟ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕದ ಅಧ್ಯಕ್ಷರಾದ ಶ್ರೀ ಎಚ್.ಬಿ.ಎಲ್. ರಾಯರು ಅಭಿನಂದನೆ ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ.

## DONATION

Received donation of Rs. 1000/- from Shri Shrikant Avabhrat for Women Welfare Cell on the happy occasion of marriage of their daughter **Chi. Sou. Ashwini** with **Chi. Mahesh Bhat** at Pavalkodi on 3rd November 2011.


**SUVITEK INTERNATIONAL**

**Authorised Dealers for : ARMSTRONG, INTERARCH, CRIL**

- PRE-ENGINEERED BUILDINGS
- ROOFINGS
- WALL CLADDINGS
- THERMAL INSULATIONS
- FALSE CEILINGS
- FALSE FLOORINGS
- BLINDS
- SIGNAGES

5/98, Jayvijay Society, Sahar Road,
Mumbai-400 099 India
Tel. : 2834 2952 ● Fax : 2824 8794
E-mail : suvitek@gmail.com

*ADVT.*


*PAGE DONATED BY : **SHRI N. R. HEGDE, DOMBIVLI** (DEC.-2012)*

ಹೆಗ್ಗಡೆ ವಿವಾಹ ಪ್ರಹಸನ'ವು ಕರ್ಕಿ ವೆಂಕಟರಮಣ ಶಾಸ್ತ್ರಿಗಳೇ ರಚಿಸಿದ್ದೆಂದು ಅಧಿಕೃತವಾಯಿತು. ಇದೇ ಮಾರ್ಗವೇ ಮುಂದೆ ವೆಂಕಟರಮಣ ಶಾಸ್ತ್ರಿಗಳ ಭಾವ ಚಿತ್ರ ಮತ್ತು ಹವ್ಯಕ ಸುಬೋಧ ಪ್ರಾಯೋಗಿಕ ಸಂಚಿಕೆ ಪಡೆಯುವದಕ್ಕೂ ಕಾರಣವಾಯಿತು.

### ಸೂರಿ ಎಂಬ ಬಿರುದು ಬಂದದ್ದು

ವಿಘ್ನೇಶ್ವರ ಶಾಸ್ತ್ರಿ ಸೂರಿ ವೆಂಕಟರಮಣ ಶಾಸ್ತ್ರಿಯವರ ತಂದೆ. ಇವರ ಪೂರ್ವಾಶ್ರಮದವರಲ್ಲೊಬ್ಬರಾದ ಸೂರ್ಯನಾರಾಯಣರೆಂಬವರು ಪ್ರಸಿದ್ಧರಾದವರಾಗಿದ್ದರು. ಸೂರ್ಯೋಪಾಸಕರಾಗಿದ್ದರು. ಇವರು ಸ್ವತಂತ್ರವಾಗಿ ಗಾಯತ್ರಿ ಪುರಶ್ಚರಣ ಯಾಗ ಮಾಡಿದ್ದರು. ಈ ಅನುಷ್ಠಾನ ಇವರ ಘರಾಣೆಗೆ ಸೂರಿ ಎಂಬ ಬಿರುದಿಗೆ ಕಾರಣವಾಯಿತು.

ಕುಮಟೆಯಲ್ಲಿ ಪ್ರಸಿದ್ಧ ಆಯುರ್ವೇದ ವೈದ್ಯರಿದ್ದರು. ಗಣೇಶ ಶಾಸ್ತ್ರಿ ಇವರು ವೆಂಕಟರಮಣ ಶಾಸ್ತ್ರಿಗಳಿಗೆ ಆಪ್ತರೋ, ಹಳೆಯ ನೆಂಟರೋ ತಿಳಿಯದು. ಇವರು ವೆಂಕಟರಮಣ ಶಾಸ್ತ್ರಿಗಳಲ್ಲಿ 'ಆಯುರ್ವೇದದಲ್ಲಿ ಐದು ವಿಧ. ಮಂತ್ರಾಯುರ್ವೇದಕ್ಕೆ ಗಾಯತ್ರಿಯೇ ಸೂಕ್ತವಲ್ಲವೇನೋ, ನಿಮ್ಮನೆ ಸೂರ್ಯನಾರಾಯಣ ಗಾಯತ್ರಿ ಪುರಶ್ಚರಣ ಮಾಡಿದ್ದ ಅವರ ವಿಧಿ ವಿಧಾನ ಬರೆದು ಬಿಡೋ'ಎಂದಿದ್ದರು. ಅನಂತರ ವೆಂಕಟ್ರಮಣ ಶಾಸ್ತ್ರಿಗಳು ಗಾಯತ್ರೀ ಪುರಶ್ಚರಣ ವಿಧಿ ವಿಧಾನ ಗ್ರಂಥ ಬರೆದು ಪ್ರಕಟಿಸಿದರು. ಇದು ದೇವನಾಗರಿ ಲಿಪಿಯಲ್ಲಿದೆ.

ವೆಂಕಟರಮಣ ಶಾಸ್ತ್ರಿಗಳ ಪುಸ್ತಕ ಪ್ರಕಟಣೆ ಪ್ರವೃತ್ತಿಗೆ ಒಂದು ಪ್ರೇರಣೆ ಒದಗಿ ಬಂದದ್ದೇ ಹೆಚ್ಚು. ಕದಂಬ ಅರಸರು ಉತ್ತರ ಭಾರತದಿಂದ ಬ್ರಾಹ್ಮಣರನ್ನು ಕರೆತಂದು ಹವ್ಯಕರೆಂದು ಹೆಸರಿಸಲ್ಪಟ್ಟರಷ್ಟೇ. ಈ ಬ್ರಾಹ್ಮಣರು ದಕ್ಷಿಣ ಮಹಾಮೇರು ಪರ್ವತದಾಟಿ ಗೋದಾವರಿ ತೀರದಿಂದ ಕಾವೇರಿ ನದಿ ನಡುವೆ ಹಂಚಿಹೋದರು. ಯಾವ ಯಾವ ದಕ್ಷಿಣ ಭಾರತ ಪ್ರದೇಶದಲ್ಲಿ ಈ ಬ್ರಾಹ್ಮಣರು ಹಂಚಿ ಹೋಗಿದ್ದಾರೆಂಬ ಕುತೂಹಲ ಸೂರಿ ಶಾಸ್ತ್ರಿಗಳದ್ದಾಗಿತ್ತು. ಈ ದಿಸೆಯಲ್ಲಿ ಎದ್ಯುಕ್ತರಾಗಿ ಕೆಲವು ತಿಂಗಳುಗಳಲ್ಲಿಯೇ ತಿರುಗಾಡಿದರು. ಅವರ ಫಲಾನುಭವವೇ 'ದಕ್ಷಿಣ ಭಾರತ ಯಾತ್ರಾ' (1885) ಪುಸ್ತಕ ಪ್ರಕಟಿಸಿದ್ದಾರೆ. ಇದು ಕನ್ನಡದ ಪ್ರಪ್ರಥಮ ಪ್ರವಾಸೀ ಸಾಹಿತ್ಯ ಕೃತಿಯಾಗಿದೆ.

1880ರ ದಶಕದಲ್ಲಿ ವೆಂಕಟರಮಣ ಶಾಸ್ತ್ರಿಗಳು ಬರೆದು ಸಂಪಾದಿಸಿದ ಒಟ್ಟು ಕೃತಿಗಳು 42. ಖಚಿತ ಶಾಸ್ತ್ರ ಜ್ಞಾನ, ದೇಶ ಕಾಲಕ್ಕೆ ಕ್ರಿಯಾಶೀಲ-ವಾದವುಗಳೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಇದೀಗ ಕರ್ಕಿ ವೆಂಕಟರಮಣ ಶಾಸ್ತ್ರಿಗಳು ಇತಿಹಾಸವಾಗಿ ಬಿಟ್ಟಿದ್ದಾರೆ. ಅವರ ಪ್ರವೃತ್ತಿ ಪ್ರಭಾವದ ಜೀವನ ಸಾಧನೆಯ ಇತಿಹಾಸದ ಮರು-ಶೋಧವಾಗಬೇಕಾಗಿದೆ. ಈ ಶೋಧ ಅಸ್ತಿ ಪಂಜರದಿಂದ ದೇಹದ ಪೂರ್ಣ ಚಿತ್ರ ನಿರ್ಮಿಸಿದಂತೆ ಅರ್ಥಪೂರ್ಣವಾಗಬೇಕಾಗಿದೆ. ಒಂದು ಚಾರಿತ್ರಿಕ, ಸಾಂಸ್ಕೃತಿಕ ಮೌಲ್ಯಯುತ ಕೃತಿಯಾಗಬೇಕಾಗಿದೆ. ●


### *Matrimonial*

Alliance invited for a girl 26 years, 5'6" ht., Vishwamitra Gotra, Hubba Nakshatra, B.E., M.B.A. working at G.F. India, Bangalore as Programme Manager from post graduate boy workingin Mumbai or any other cities. Those who are interested may ***Contact*** : 022-26434954 (Mumbai)


## ಹವ್ಯಕರ ಪಿಕ್‌ನಿಕ್ ಭಾರೀ ಗಮ್ಮತ್ತು









PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE** (DEC.-2012)

RNI NO. MAHBIL / 2000 / 746,
Postal R.NO. MH/MR/N/161/MBI/2012-2014

*Posted at Mumbai Patrika Channel Stg. Office Mumbai-400 001*

**Date of Posting :**
**27, 28th of every previous month**

***If undelivered, please return to :***
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**REGISTERED NEWSPAPER**

**To,**

## STATEMENT PARTICULARS ABOUT "HAVYAKA SANDESHA"

### FORM IV

| | | | |
|---|---|---|---|
| 1. | Place of Publication | : | Mumbai |
| 2. | Periodicity | : | Monthly |
| 3. | Date of Publication | : | 1st of every month |
| 4. | Price | : | Rupee 2/- per issue |
| 5. | Printer's Name | : | **Narayana Akadas R.** |
| | Whether Citizen of India | : | Yes |
| | Address | : | B-207, Valmiki Apts., Near Pharmacy College,Sundar Nagar, Kalina, Vidyanagari P. O. Mumbai - 400 098. ✆ 2665 2591 |
| 6. | Publisher's Name | : | **Narayana Akadas R.** |
| | Whether Citizen of India | : | Yes |
| | Address | : | B-207, Valmiki Apts., Near Pharmacy College,Sundar Nagar, Kalina, Vidyanagari P. O. Mumbai - 400 098. ✆ 2665 2591 |
| 7. | Editor's Name | : | **Smt. Amita S. Bhagwat** |
| | Whether Citizen of India | : | Yes |
| | Address | : | B-207, Valmiki Apts., Near Pharmacy College,Sundar Nagar, Kalina, Vidyanagari P. O. Mumbai - 400 098. ✆ 2665 2591 |
| 8. | Name & Address of Owners | : | "Havyaka Welfare Trust" B-207, Valmiki Apts., Near Pharmacy College, Sundar Nagar, Kalina, Vidyanagari P. O. Mumbai - 400 098. ✆ 2665 2591 |

I, Narayan Akadas R., hereby declare that the particulars given above are true to the best of my knowledge & belief.

Sd/-
**Narayan Akadas R.**
*Signature of the Publisher*

Mumbai
Date : 1-3-2012





*PAGE DONATED BY : **SHRI VIVEK BHAGWAT,** MULUND (DEC.-2010)*